ವಿಜಯಪುರ | ಸಂಪುಟ 02 | ಸಂಚಿಕೆ 79 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಮೇ 15, 2024

"ಎಚ್.ಡಿ.ರೇವಣ್ಣಗೆ ಜಾಮೀನು ಸಿಕ್ಕಿದೆ ಎಂದು ಸಂಭ್ರಮ ಪಡುವುದು ಬೇಡ. ನಾನು ಸಂತೋಷ ಪಡುತ್ತೇನೆ ಎಂದು ಭಾವಿಸಬೇಡಿ. ಕಾರ್ಯಕರ್ತರು ಸಂಭ್ರಮಿಸುವ ಸಮಯ ಇದಲ್ಲ. ಇದು ರಾಜ್ಯವೇ ತಲೆ ತಗ್ಗಿಸುವ ಘಟನೆಯಾಗಿದೆ."



– ಹೆಚ್.ಡಿ ಕುಮಾರಸ್ವಾಮಿ
ಜೆಡಿಎಸ್ ರಾಜ್ಯಾಧ್ಯಕ್ಷರು

ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿಯಿಂದ ಅಪಪ್ರಚಾರ । ಮಟುವಾ ಸಮುದಾಯಕ್ಕೆ ಪೌರತ್ವ

# ಮಮತಾ ಬ್ಯಾನರ್ಜಿಯಿಂದ ಸಿಎಎ ಜಾರಿ ತಡೆ ಅಸಾಧ್ಯ :ಅಮಿತ್ ಶಾ



ನವದೆಹಲಿ: ಪೌರತ್ವದ ಕುರಿತು ಮಟುವಾ ಸಮುದಾಯದ ಕಳವಳವನ್ನು ಪರಿಹರಿಸುವ ಪ್ರಯತ್ನ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ. "ಸಮುದಾಯವು ಸಿಎಎ ಅಡಿಯಲ್ಲಿ ಪೌರತ್ವವನ್ನು ಪಡೆಯುತ್ತಾರೆ; ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅದರ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ" ಎಂದು ಆರೋಪಿಸಿದರು.

ಮಟುವಾ ಸಮುದಾಯದ ಭದ್ರಕೋಟೆ ಬೊಂಗಾವ್‌ನಲ್ಲಿ ರ್ಯಾಲಿಯನ್ನುದ್ದೇಶಿಸಿ ಮಾತನಾಡಿದ ಶಾ, "ಮಮತಾ ಬ್ಯಾನರ್ಜಿಯವರು ಬಂಗಾಳದಲ್ಲಿ ಪೌರತ್ವ ತಿದ್ದುಪಡಿ ಕಾಯಿದೆಯ ಅನುಷ್ಠಾನವನ್ನು ಎಂದಿಗೂ ತಡೆಯಲು ಸಾಧ್ಯವಿಲ್ಲ. ಏಕೆಂದರೆ, ಇದು ಕೇಂದ್ರ ಸರ್ಕಾರದ ಕಾನೂನಾಗಿದೆ. ನನ್ನ ನಿರಾಶ್ರಿತ ಸಹೋದರರು ಭಾರತದ ನಾಗರಿಕರಾಗುವುದನ್ನು ವಿಶ್ವದ ಯಾವುದೇ ಶಕ್ತಿ ತಡೆಯಲು ಸಾಧ್ಯವಿಲ್ಲ; ಇದು ಮೋದಿಯವರ ಭರವಸೆ. ಪೌರತ್ವವು ಕೇಂದ್ರ ಸರ್ಕಾರದ ವಿಶೇಷ ಅಧಿಕಾರದ ಅಡಿಯಲ್ಲಿ ಬರುತ್ತದೆ, ರಾಜ್ಯ ಸರ್ಕಾರಗಳಲ್ಲ ಎಂಬುದನ್ನು ಮಮತಾ ಬ್ಯಾನರ್ಜಿ ನೆನಪಿಟ್ಟುಕೊಳ್ಳಬೇಕು" ಎಂದು ಅವರು ಹೇಳಿದರು.

ಬ್ಯಾನರ್ಜಿ ಅವರು ಸುಳ್ಳು ಮತ್ತು ಸಿಎಎ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಶಾ ಆರೋಪಿಸಿದರು.

"ಸಿಎಎ ಅಡಿಯಲ್ಲಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸುವ ಯಾರಾದರೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಮಮತಾ ಬ್ಯಾನರ್ಜಿ ಸುಳ್ಳು ಹೇಳುತ್ತಿದ್ದಾರೆ. ಮಟುವಾ ಸಮುದಾಯದ ಜನರಿಗೆ ಯಾರಿಗೂ ತೊಂದರೆ ಆಗುವುದಿಲ್ಲ ಎಂದು ಭರವಸೆ ನೀಡಲು ಬಂದಿದ್ದೇನೆ. ನೀವು ಪೌರತ್ವವನ್ನು ಪಡೆಯುತ್ತೀರಿ ಮತ್ತು ದೇಶದಲ್ಲಿ ಗೌರವದಿಂದ ಬದುಕಲು ಸಾಧ್ಯವಾಗುತ್ತದೆ" ಎಂದು ಅಮಿತ್ ಶಾ ಹೇಳಿದರು.

## ಮೇ 16 ರಂದು ಕೃಷ್ಣಾ ಕಾಲುವೆಗೆ ನೀರು

ಉದಯರಶ್ಮಿ ನ್ಯೂಸ್



ಇಂಡಿ: ತಾಲೂಕಿನಲ್ಲಿ ಹರಿಯುವ ಕೃಷ್ಣಾ ಕಾಲುವೆಗೆ ನೀರು ಹರಿಯ ಬಿಡಲಾಗಿದ್ದು ಅದು ಮೇ. 16 ರಂದು ಇಂಡಿ ತಾಲೂಕು ತಲುಪಲಿದೆ ಎಂದು ಕೃಷ್ಣಾ ಬಾಗ್ಯ ಜಲ ನಿಗಮದ ಅಧಿಕ್ಷಕ ಅಭಿಯಂತರ ಮನೋಜಕುಮಾರ ಗಡಬಳ್ಳಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಈಗಾಗಲೇ ನೀರು ಸಿಂದಗಿ ತಾಲೂಕಿನ ಕಾಲುವೆಗಳಲ್ಲಿ ಹರಿಯುತ್ತಿದ್ದು ಸಿಂದಗಿ ತಾಲೂಕಿನ ಬಳಗಾನೂರ ಕೆರೆಯನ್ನು ತುಂಬಲಾಗುತ್ತಿದೆ.

ನಂತರ ಮೇ 16 ರಂದು ಇಂಡಿ ತಾಲೂಕಿಗೆ ಸಂಬಂದಿತ ಸಂಗೋಗಿ ಕೆರೆ, ತಾಲೂಕಿನ ಲೋಣಿ ಕೆಡಿ ಕೆರೆ ತುಂಬಿಸಲಾಗುವದು.

ಈ ನೀರು ಕುಡಿಯಲು ಮತ್ತು ಜನ ಜಾನುವಾರುಗಳ ಉಪಯೋಗಕ್ಕೆ ಮಾತ್ರ ಬಳಸಲು ತಿಳಿಸಲಾಗಿದೆ ಎಂದರು.

ಇಂಡಿಯ ಕಂದಾಯ ಉಪ ವಿಬಾಗಾಧಿಕಾರಿ ಅಬೀದ್ ಗದ್ಯಾಳ ಮತ್ತು ಡಿ.ಎಸ್.ಪಿ ಜಗದೀಶ ಮಾತನಾಡಿ ಕೃಷ್ಣಾ ಕಾಲುವೆ ನೀರು ಕುಡಿಯಲು ಮಾತ್ರ ಬಳಸಬೇಕು. ಕಾಲುವೆ ಮತ್ತು ಕೆರೆಯ ಮೇಲೆ ವಿದ್ಯುತ್ ಪಂಪ ಉಪಯೋಗಿಸಿ ನೀರು ಕೃಷಿಗೆ ಪಡೆದುಕೊಂಡರೆ ಕಾನೂನು ರಿತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮತ್ತು ಕಾಲುವೆ 200 ಮೀ ಸುತ್ತಲಿನ ಪ್ರದೇಶದಲ್ಲಿ ಮೋಟಾರು ಬಳಸದಂತೆ 144 ಕಲಂ ಜಾರಿಗೆ ಯಲ್ಲಿದೆ ಎಂದು ತಿಳಿಸಿದ್ದಾರೆ.

## ಲೈಂಗಿಕ ದೌರ್ಜನ್ಯ ಪ್ರಕರಣ: ಎಸ್‌ಐಟಿ ದಾಳಿ

ಹಾಸನ: ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಹಾಸನ ಜಿಲ್ಲೆಯ ವಿವಿಧೆಡೆ ಮಂಗಳವಾರ ದಾಳಿ ನಡೆಸಿದೆ. ಬಿಜೆಪಿ ನಾಯಕರ ಆಪ್ತರ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ರೇವಣ್ಣ ಅವರದು ಎನ್ನಲಾದ ವೀಡಿಯೊಗಳ ಸೋರಿಕೆಯ ಮೂಲವನ್ನು ಪತ್ತೆಹಚ್ಚಲು ಹುಡುಕಾಟ ನಡೆಸಲಾಗಿದೆ ಎಂದು ಅವರು ಹೇಳಿದರು. ಹಾಸನ ಲೋಕಸಭಾ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಮರು ಆಯ್ಕೆ ಬಯಸಿರುವ ಪ್ರಜ್ವಲ್ ರೇವಣ್ಣ ತಲೆಮರೆಸಿಕೊಂಡಿದ್ದು, ಇಂಟರ್‌ಪೋಲ್ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದೆ.



## ಲೈಂಗಿಕ ಕಿರುಕುಳ ಕೇಸ್: ಎಚ್ಡಿಕೆ ಆರೋಪಕ್ಕೆ ಡಿಕೆಶಿ ತಿರುಗೇಟು!

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಅವರದು ಎನ್ನಲಾದ ಮಹಿಳೆಯರಿಗೆ ಲೈಂಗಿಕ ದೌರ್ಜನ್ಯದ ವಿಡಿಯೋ ಸೋರಿಕೆ ಹಿಂದೆ ದೊಡ್ಡ ತಿಮಿಂಗಲವೇ ಇದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್. ಡಿ.ಕುಮಾರಸ್ವಾಮಿ ಮಂಗಳವಾರ ಆರೋಪಿಸಿದ್ದು, ಡಿಸಿಎಂ ಡಿಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮತ್ತೊಂದೆಡೆ ಈ ಬಗ್ಗೆ ಪ್ರತಿಕ್ರಿಯಿಸಲು ಡಿಕೆ ಶಿವಕುಮಾರ್ ನಿರಾಕರಿಸಿದ್ದಾರೆ.



ಪ್ರಜ್ವಲ್ ರೇವಣ್ಣ ಪ್ರಕರಣ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ವಿಡಿಯೋ ಬಿಡುಗಡೆ ಹಿಂದೆ ದೊಡ್ಡ ತಿಮಿಂಗಿಲಗಳ ಕೈವಾಡವಿದೆ ಎಂದು ಹೇಳಿದರು. ದೊಡ್ಡ ತಿಮಿಂಗಿಲ ಯಾರೆಂದು ವಿವರಿಸಲು ಕೇಳಿದಾಗ, ಅದು ಬೇರೆ ಯಾರು? ಇಂದು ಮಂಡ್ಯದ ಶಾಸಕರೊಬ್ಬರು ದೊಡ್ಡ ತಿಮಿಂಗಿಲದ ಬಗ್ಗೆ ಮಾತನಾಡಿದ್ದಾರೆ. ದೊಡ್ಡ ತಿಮಿಂಗಿಲ' ಏನು ಹೇಳುತ್ತಿದೆಯೋ, ಅದನ್ನೇ ಸಣ್ಣ ತಿಮಿಂಗಿಲಗಳು' ಅನುಸರಿಸುತ್ತವೆ. ವಕೀಲರ ವಾದ ಆಲಿಸಿದರೆ ಶಾಸಕ ಎಚ್‌ಡಿ ರೇವಣ್ಣ ಅವರ ಬಂಧನ ದ್ವೇಷದ ರಾಜಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮಾಜಿ ಪ್ರಧಾನಿ ದೇವೇಗೌಡರ ಪ್ರತಿಷ್ಠೆಯನ್ನು ಹಾಳು ಮಾಡಲು ಸರ್ಕಾರ ರೇವಣ್ಣ ವಿರುದ್ಧ ಕ್ರಮ ಕೈಗೊಂಡಿದೆ ಎಂದು ಆರೋಪಿಸಿದರು.

ಅವರೇ ಸರ್ಕಾರದಲ್ಲಿರುವಾಗ ಯಾರಾದರೂ ದೊಡ್ಡ ತಿಮಿಂಗಿಲವನ್ನು ಹೇಗೆ ಹಿಡಿಯುತ್ತಾರೆ ಎಂದು ಅವರು ಪ್ರಶ್ನಿಸಿದರು.

## ಸಾಮೂಹಿಕ ವಿವಾಹ :ನೋಂದಣಿ ಮನವಿ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ, ಮೇ. 13

ತಾಲೂಕಿನ ಡೋಣೂರ ಗ್ರಾಮದ ಕಟ್ಟೇಮನಿ ಹಿರೇಮಠದ ಗುರು ಮರುಳಸಿದ್ದೇಶ್ವರ ಜಾತ್ರಾಮಹೋತ್ಸವ. ಹಜರತ್ ಸುಲೇಮಾನ ಉರುಸು ಮತು ಚೌಡಮ್ಮದೇವಿ ಜಾತ್ರಾಮಹೋತ್ಸವ ಜೂ. 6 ಮತ್ತು 7 ರಂದು ನಡೆಯಲಿದೆ. ಜಾತ್ರಾಮಹೋತ್ಸವದಂಗವಾಗಿ ಮೇ.23 ರಿಂದ ಜೂ.7 ರವರೆಗೆ ಹನುಮನಾಳದ ಶಿವಾನಂದೀಶ್ವರ ಶಾಸ್ತ್ರಿಗಳಿಂದ ಕಲಬುರಗಿ ಶರಣಬಸವೇಶ್ವರರ ಚರಿತ್ರೆ ಪ್ರತಿನಿತ್ಯ ಸಂಜೆ 7 ಗಂಟೆಗೆ ಶ್ರೀಮಠದಲ್ಲಿ ಪುರಾಣ ಜರುಗಲಿದೆ. ಜಾತ್ರಾಮಹೋತ್ಸವದಂಗವಾಗಿ ಜೂ. 7 ರಂದು ನಡೆಯುವ ಕಾರ್ಯಕ್ರಮದಲ್ಲಿ ಸರ್ವಧರ್ಮೀಯರ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿದೆ. ಸಾಮೂಹಿಕ ವಿವಾಹದಲ್ಲಿ ಮದುವೆ ಮಾಡಿಕೊಳ್ಳಲಿಚ್ಛಿಸುವವರು ವಧು-ವರ ಅವರ ಶಾಲೆಯ ದಾಖಲಾತಿ, ಆಧಾರ ಕಾರ್ಡ್, ವೋಟರ್ ಐಡಿ, ರಹವಾಸಿ ಪ್ರಮಾಣ ಪತ್ರ, ವಧು-ವರರ ನಾಲ್ಕು ಪೋಟೋಗಳೊಂದಿಗೆ ಜೂ.2 ರೊಳಗೆ ಜಾತ್ರಾ ಕಮೀಟಿಯಲ್ಲಿ ತಮ್ಮ ಹೆಸರು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗೆ ಎಸ್.ಎಂ. ದುಂಬಾಳಿ- 9901596806, ಕೆ.ಜಿ.ಪಾಟೀಲ- 9535497299, ಎಸ್.ಎ.ಹಿರೇಮಠ- 9972785142, ಜಿ.ಡಿ.ಕೆರುಟಗಿ- 9482629608 ಅವರನ್ನು ಸಂಪರ್ಕಿಸಬೇಕೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ಶ್ರೀಮಂತ ಪರಂಪರೆಯ ಬಂಜಾರ ಸಂಸ್ಕೃತಿ :ಸೋಮಲಿಂಗ ಶ್ರೀ

ಉದಯರಶ್ಮಿ ನ್ಯೂಸ್



ಬಸವನಬಾಗೇವಾಡಿ: ಬಂಜಾರ ಸಮುದಾಯವು ತನ್ನದೇಯಾದ ವೇಷಭೂಷಣದಿಂದ ಭಾರತೀಯ ಶ್ರೀಮಂತ ಕಲಾ ಸಂಸ್ಕೃತಿಗೆ ಅಪಾರವಾದ ಕೊಡುಗೆ ನೀಡಿದೆ ಎಂದು ಕೇಸರಟ್ಟಿಯ ಸೋಮಲಿಂಗ ಮಹಾರಾಜರು ಹೇಳಿದರು.

ಪಟ್ಟಣದ ಗಣೇಶ ನಗರದಲ್ಲಿರುವ ಯಲ್ಲಾಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ರಾಷ್ಟ್ರೀಯ ಗೋರ್(ಬಂಜಾರ) ಮಾಳಾವ, ಅರಕೇರಿ-2ದ ಎ.ಎಂ.ಆರ್.ಸಂಕಲ್ಪ ಸಂವೀಜಿನಿ ಸಂಸ್ಥೆಯ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಂಜಾರ ಕಲಾಮೇಳ ಹಾಗೂ ರಾಜ್ಯಮಟ್ಟದ ಬಂಜಾರ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಬಂಜಾರ ಸಂಸ್ಕೃತಿಯು ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆ ಹೊಂದಿದೆ. ಈ ಸಮುದಾಯದವರು ಆರ್ಥಿಕವಾಗಿ ಬಡವರಾದರೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಬಂಜಾರ ಸಮುದಾಯದ ಪ್ರದರ್ಶನ ಕಲೆ, ವೇಷಭೂಷಣ, ಮೌಖಿಕ ಸಾಹಿತ್ಯ ಆಧುನೀಕರಣದ ಪ್ರಭೆಯಲ್ಲಿ ಮಂಕಾಗಬಾರದು. ನಮ್ಮ ಸಮುದಾಯ ಬಾಂಧವರು ಯಾವುದೇ ಕಾರಣಕ್ಕೂ ಅನ್ಯ ಧರ್ಮಕ್ಕೆ ಮತಾಂತರವಾಗಬಾರದು. ವೈಶಿಷ್ಟಪೂರ್ಣ, ಶ್ರೇಷ್ಠ ಸಂಸ್ಕೃತಿಯಾದ ಬಂಜಾರ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವಾದರೆ ಮಾತ್ರ ಬಂಜಾರ ಸಮಾಜ ಮುಂದುವರೆಯಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಗೋರ್ ಮಳಾವ್ ಸಂಘಟನೆಯ ಕಾರ್ಯಾಧ್ಯಕ್ಷ ಜಯಸಿಂಹ ಖಾಟ್ರೋತ, ರಾಜ್ಯ ಸಂಚಾಲಕ ಎಸ್.ಪಿ.ಲಿಂಬ್ಯಾನಾಯಕ, ಮಲ್ಲಿಕಾರ್ಜುನ ನಾಯಕ, ರವಿ ರಾಠೋಡ, ಹರಿಲಾಲ ನಾಯಕ, ಬಾಬು ಚವ್ಹಾಣ, ಶಾಂತು ರಾಠೋಡ, ಬಾಳು ರಾಠೋಡ, ಶಿವಾಜಿ ರಾಠೋಡ, ಬಸವರಾಜ ಲಮಾಣಿ, ಲಕ್ಷ್ಮಣ ರಾಠೋಡ, ರುಕ್ಮಿಣಿ ರಾಠೋಡ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ಆಯುಕ್ತ ಬಸವರಾಜ ಲಮಾಣಿ ಇತರರು ಇದ್ದರು.

ಅಧ್ಯಕ್ಷತೆಯನ್ನು ರಾಷ್ಟ್ರೀಯ ಗೋರ್(ಬಂಜಾರಾ) ಮಳಾವದ ರಾಜ್ಯಾಧ್ಯಕ್ಷ ಡಾ.ಬಸವರಾಜ ಚವ್ಹಾಣ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಜಿ ಟಿವಿ ಕನ್ನಡದ ಸರಿಗಮಪ ಖ್ಯಾತಿಯ ಗಾಯಕ ರಮೇಶ ಲಮಾಣಿ, ಗಾಯಕ ಆರ್.ಬಿ.ನಾಯಕ, ಪುಂಡಲಿಕ ಲಮಾಣಿ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಮಾಜ ಬಾಂಧವರಿಗೆ ಬಂಜಾರಾ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಶ್ವ ತಾಯಂದಿರ ದಿನಾಚರಣೆಯಂಗವಾಗಿ ಬಳ್ಳಾವುರ ತಾಂಡೆಯ 101ನೇ ಜನ್ಮದಿನಾಚರಣೆ ಆಚರಿಸಿಕೊಳ್ಳುತ್ತಿರುವ ಸೋನಾಬಾಯಿ ಹಾಪಸು ಪವಾರ ಅವರಿಗೆ ತುಲಾಭಾರ ನಡೆಯಿತು. ಮೋತಿಲಾಲ ರಾಠೋಡ ಸ್ವಾಗತಿಸಿದರು. ಪುಂಡಲೀಕ ಲಮಾಣಿ ನಿರೂಪಿಸಿದರು. ವಸಂತ ಚವ್ಹಾಣ ವಂದಿಸಿದರು. ಬಂಜಾರಾ ಕಲಾಮೇಳ ಕಾರ್ಯಕ್ರಮದಲ್ಲಿ ವಿವಿಧ ಭಾಗಗಳ ಕಲಾವಿದರು ಭಾಗವಹಿಸಿದ್ದರು.

## ರೇವತಗಾಂವ ತೆಂಗಿನ ಮರಕ್ಕೆ ಸಿಡಿಲು ಬಡಿತ

ಉದಯರಶ್ಮಿ ನ್ಯೂಸ್



ಚಡಚಣ: ಸೋಮವಾರ ಸಂಜೆ ವೇಳೆಗೆ ತೆಂಗಿನ ಮರವೊಂದಕ್ಕೆ ಸಿಡಿಲು ಬಡಿದು ಬೆಂಕಿ ಕಾಣಿಸಿಕೊಂಡ ಘಟನೆ ರೇವತಗಾಂವ ಗ್ರಾಮದ ಜಮೀನವೊಂದರಲ್ಲಿ ನಡೆದಿದೆ.


ವಿಠ್ಠಲ ಲಾಯಪ್ಪ ಲೋಣಿಯವರ ಜಮೀನಿನಲ್ಲಿರುವ ಮನೆಯ ಮುಂಭಾಗ 50 ಮೀಟರ್ ಅಂತರದಲ್ಲಿರುವ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ. ಸಂಜೆ 11:15ರ ಸುಮಾರಿಗೆ ಬೀರುಗಾಳಿ ಸಹಿತ ಮಿಂಚು ಸಿಡಿಲಿನ ಅಬ್ಬರದಲ್ಲಿ ಸಿಡಿಲು ಬಡಿದ ಪರಿಣಾಮವಾಗಿ ತೆಂಗಿನ ಮರದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅದೃಷ್ಟವಶಾತ್ ಮನೆಯವರಿಗೆ ಯಾವುದೇ ಅಪಾಯವಾಗಿಲ್ಲ ಎಂದು ತಿಳಿಸಿದ್ದಾರೆ.

### ರಾಜ ನುಡಿ

ಅಸಲಿಗಿಂತ ಬಡ್ಡಿಯ ಮೇಲೆ ಮನುಷ್ಯನಿಗೆ ಒಲವು ಹೆಚ್ಚಂತೆ. ಹಾಗೆಯೇ ಅಜ್ಜ-ಅಜ್ಜಿಗೆ ಮಕ್ಕಳಿಗಿಂತ ಮೊಮ್ಮಕ್ಕಳ ಮೇಲೆ ಪ್ರೀತಿ ಜಾಸ್ತಿ. ಪ್ರೀತಿಗೆ ಮೇಲ್ಮುಖಕ್ಕಿಂತ ಇಳಿಮುಖ ಹರಿವಿನ ಪ್ರಮಾಣ ಹೆಚ್ಚು.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 379



*ನೀ ದೇವರೊಳಗೊ ? ದೇವರು ನಿನ್ನೊಳಗೊ*
*ಎಂಬಠಾವನರಿಯೆ.*
*ಸಿಪ್ಪೆ ಒಪ್ಪೆಗೆಟ್ಟಾಗ ಹಣ್ಣಿನ ರಸ ಕೊಳಕಾಯಿತ್ತು,*
*ಅದು ಗುಹೇಶ್ವರನೊಪ್ಪದ ಮಾತು.*

ಮಾನವ ಜನ್ಮದ ಸಾರ್ಥಕತೆ ಯಾವುದರಲ್ಲಿ ಅಡಗಿದೆ ಎಂಬುದನ್ನು ಈ ವಚನದಲ್ಲಿ ಅಲ್ಲಮಪ್ರಭುಗಳು ಸ್ಪಷ್ಟಪಡಿಸಿದ್ದಾರೆ. ಸುಮಾರು 13 ಬಿಲಿಯನ್ ವರ್ಷಗಳ ಹಿಂದೆ ಸಂಭವಿಸಿದ ಮಹಾ ಸ್ಫೋಟದ ನಂತರ ಉದಯವಾದ ಈ ವಿಶ್ವದಲ್ಲಿ ಅಂದಿನಿಂದ ಇಂದಿನವರೆಗೂ ವಿಶ್ವದಾದ್ಯಂತ ಮಹಾ ಲಿಂಗದ ಚೈತನ್ಯ ಶಕ್ತಿಯು (cosmic energy) ಸಕಲ ಚರಾಚರ ವಸ್ತುಗಳಲ್ಲಿ ಪ್ರವಹಿಸುತ್ತಿದ್ದ , ಅಡಗಿ ಕಾಣದಂತೆ ವಿಶ್ವವನ್ನು ಕ್ರಮಬದ್ಧವಾಗಿ ಮುನ್ನಡೆಸಿಕೊಂಡು ಸಾಗುತ್ತಿದೆ. ಅದು ಜೀವಿಗಳಲ್ಲಿ ಆತ್ಮ ರೂಪದಲ್ಲಿ ವಸ್ತುಗಳಲ್ಲಿ ಅಣುಶಕ್ತಿಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ.ನಮ್ಮೊಳಗಿನ ಆತ್ಮ ಶಕ್ತಿಯನ್ನು ಶರಣರು ಪ್ರಾಣಲಿಂಗವೆಂದು ಜಾಗತಿಕ ಚಲನಾಶಕ್ತಿ ಯನ್ನು ಮಹಾಲಿಂಗವೆಂದು ಕರೆದಿದ್ದಾರೆ. ಹಾಗಾಗಿ ನಮ್ಮೊಳಗಿನ ಪ್ರಾಣಲಿಂಗವೇ ಹೊರಗೆ ಮಹಾಲಿಂಗವಾಗಿ ಇರುವ ಕಾರಣ. ಇಲ್ಲಿ ಅಲ್ಲಮಪ್ರಭುಗಳು "ನೀ ದೇವರೊಳಗೊ ? ದೇವರು ನಿನ್ನೊಳಗೊ ಎಂಬಠಾವನರಿಯೆ."ಎಂದಿದ್ದಾರೆ. ಇದು ಜಗತ್ತಿನ ಪ್ರತಿಯೊಬ್ಬ ಜೀವಿಯೂ ಅರಿತುಕೊಳ್ಳಬೇಕಾದ ಮೂಲಜ್ಞಾನವಾಗಿದ್ದು, ಅಂಗ ಸುದೃಢವಾಗಿದ್ದಾಗಲೇ ಈ ಅರಿವನ್ನು ಹೊಂದುವುದು ಉತ್ತಮ ಎಂದು ಹೇಳುವ ನಿಟ್ಟಿನಲ್ಲಿ ಹಣ್ಣಿನ ಹೊರ ಕವಚವು ಉತ್ತಮವಾ ಗಿದ್ದರೆ ಮಾತ್ರ ಒಳಗಿನ ರಸ ಸ್ವೀಕರಿಸಲು ಯೋಗ್ಯವಾಗಿರುತ್ತದೆ. ಹೊರ ಕವಚವು ಕೊಳೆತು ಹೋದರೆ ಒಳಗಿನ ತಿರುವಿನಲ್ಲಿ ಯಾವುದೇ ಸ್ವೀಕರಿಸಲು ಯೋಗ್ಯವಾದ ರಸ ಇರುವುದಿಲ್ಲ ಎಂದು ಹೇಳುವ ಮೂಲಕ ಆಯುಷ್ಯ ತಿರುವ ಮುಂಚೆ ಈ ಜ್ಞಾನವನ್ನು ಪಡೆದುಕೊಳ್ಳಲು ಸಲಹೆ ನೀಡಿದ್ದಾರೆ. ಇದು ಬಸವಣ್ಣನವರ ಪ್ರಸಿದ್ಧ ವಚನಕ್ಕೆ ಪೂರಕವಾಗಿದೆ."ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,ಮುಪ್ಪಿಂದೊಪ್ಪವಳಿಯದ ಮುನ್ನ,ಮೃತ್ಯು ಮುಟ್ಟದ ಮುನ್ನಪೂಜಿಸು ಕೂಡಲಸಂಗಮದೇವನ.ಅಧ್ಯಾತ್ಮ ಎಂಬುದು ಕೇವಲ ವಯಸ್ಸಾದವರಿಗೆ ಮಾತ್ರ ಅಲ್ಲ ಎಂಬ ಸತ್ಯವನ್ನು ಇಲ್ಲಿ ಅಲ್ಲಮಪ್ರಭುಗಳು ಪ್ರಚುರಪಡಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಇಂದು ರಕ್ತದ ಅಗತ್ಯ ಹೆಚ್ಚಿದೆ :ಶಿವಪುತ್ರ ಶ್ರೀ

**ಉದಯರಶ್ಮಿ ನ್ಯೂಸ್**

ಇಂಡಿ: ರಕ್ತ ದಾನ ಶ್ರೇಷ್ಠ ದಾನ, ಅದರಲ್ಲಿ ಯುವ ಜನತೆಯ ಪಾತ್ರ ಹೆಚ್ಚಿದೆ. ಇಂದು ಎಲ್ಲೆಡೆ ರಕ್ತದ ಅಗತ್ಯತೆ ಹೆಚ್ಚಿದೆ. ಆದ್ದರಿಂದ ರಕ್ತದಾನಿಗಳ ಅಗತ್ಯವು ಹೆಚ್ಚಿದೆ ಎಂದು ರೋಡಗಿಯ ಅಭಿನವ ಶಿವಪುತ್ರ ಮಹಾಸ್ವಾಮಿಗಳು ಹೇಳಿದರು.



ತಾಲೂಕಿನ ರೋಡಗಿ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶಿವಲಿಂಗೇಶ್ವರ ಮಹಾಸ್ವಾಮಿಗಳ 13 ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ನಿಮಿತ್ಯ ನಡೆದ ಉಚಿತ ಆರೋಗ್ಯ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಮತ್ತು ಬೃಹತ್ ರಕ್ತದಾನ ಶಿಬಿರದಲ್ಲಿ ಮಾತನಾಡುತ್ತಿದ್ದರು.

ಅಪಘಾತಕ್ಕಿಡಾದವರಿಗೆ ಮತ್ತು ಹೆರಿಗೆ ಸಂದರ್ಭದಲ್ಲಿ ರಕ್ತದ ಕೊರತೆಯಿಂದ ಹೋಗುವ ಜೀವಗಳನ್ನು ಉಳಿಸಲು ರಕ್ತದಾನ ಮಾಡುವದು ಅತೀ ಅವಶ್ಯ ಎಂದರು.

ಗೋಳಸಾರದ ಅಭಿನವ ಪುಂಡಲಿಂಗ ಶಿವಯೋಗಿಗಳು ಸಾನಿಧ್ಯ ವಹಿಸಿದ್ದರು.

ಶಿಬಿರದಲ್ಲಿ ಡಾ॥ ಅನೀಲ ರಾಠೋಡ, ಸಂಗಮೇಶ ಕಡಿಬಾಗ, ಆರೀಫ್ ಇನಾಮದಾರ, ಅರುಣ ಕಾಂಬಳೆ, ಪ್ರಕಾಶ ಕವಲಗಿ ಮತ್ತಿತ–ರಿದ್ದರು.

ಗ್ರಾಮಸ್ಥರಾದ ರುದ್ರಗೌಡ ಅಲಬಗೊಂಡ, ಪ್ರಶಾಂತ ಅಲಗೊಂಡ, ಶಂಕರಗೌಡ ಬಂಡಿ, ಸಂತೋಷ ಪಾಟೀಲ, ಗಂಗಾಧರ ಬಡಿದಾಳ, ಗಜಾನನ ನಿರ್ವಹಣಶೆಟ್ಟಿ, ಶ್ರೀಮಂತ ತಾವರಖೇಡ, ಶ್ರೀಧರ ಪೂಜಾರಿ ಮತ್ತಿತರಿದ್ದರು.

450 ಜನರಿಗೆ ನೇತ್ರ ತಪಾಸಣೆ, 25 ಜನರಿಗೆ ಶಸ್ತ್ರಚಿಕಿತ್ಸೆ, 12 ಜನ–ರಿಗೆ ಕಣ್ಣು ಪೊರೆ ತೆಗೆಯುವದು ಸೇರಿದಂತೆ 32 ಜನ ರಕ್ತದಾನ ಮಾಡಿದರು.

# ವಿಜಯಪುರದಲ್ಲಿ ಕಳ್ಳರ ಬಂಧನ :ಚಿನ್ನಾಭರಣ ವಶ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮೂವರು ಕಳ್ಳರನ್ನು ಬಂಧಿಸಿರುವ ವಿಜಯಪುರ ಪೊಲೀಸರು, ಬಂಧಿತರಿಂದ 2.40 ಲಕ್ಷ ರೂ. ಮೌಲ್ಯದ

40 ಗ್ರಾಂ ತೂಕದ ಬಂಗಾರದ ಆಭರಣಗಳು ಜಪ್ತ ಮಾಡಿದ್ದಾರೆ.

ಬೆಳಗಾವಿ ಶಿವಬಸವ ನಸವಿತಾ ಸಂಜು ಲೊಂಡೆ (40), ನಿಪ್ಪಾಣಿಯ ಸ್ವಪ್ನಾ ವಿಕಾಸ ಜಾಧವ (30), ಪ್ರೇರಣಾ ಸತೀಶ ಚೌಗಲೆ(22) ಬಂಧಿತ ಆರೋಪಿತರು.



ನಗರದ ಸ್ಯಾಟ್ ಲೈಟ್ ಬಸ್ ನಿಲ್ದಾಣದಲ್ಲಿ ಮಂಗಳವಾರ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದಾಗ ಇವರನ್ನು ಹಿಡಿದು ವಿಚಾರಣೆಗೊಳಪಡಿಸಿದಾಗ ಚಿನ್ನಾಭರಣ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಬಂಗಾರದ ಆಭರಣ ಕಳ್ಳತನವಾದ ಪ್ರಕರಣ ದಾಖಲಾಗಿದ್ದು, ಈ ಪ್ರಕರಣ ಭೇದಿಸಲು ಎಸ್ಪಿ ಋಷಿಕೇಶ್ ಸೋನಾವಣೆ ಅವರು ಹೆಚ್ಚುವರಿ ಎಸ್ಪಿ ಶಂಕರ ಮಾ–ರಿಹಾಳ, ರಾಮನಗೌಡ ಹಟ್ಟಿ, ಡಿವೈಎಸ್ಪಿ ಬಸವರಾಜ ಎಲಿಗಾರ ಅವರ ಮಾರ್ಗದರ್ಶನದಲ್ಲಿ ಗಾಂಧಿಚೌಕ್ ಠಾಣೆ ಸಿಪಿಐ ಮಹಾಂತೇಶ ದ್ಯಾಮಣ್ಣವರ ನೇತೃತ್ವದಲ್ಲಿ ಒಂದು ವಿಶೇಷ ತನಿಖಾ ತಂಡ ರಚಿಸಿದ್ದರು. ಈ ತನಿಖಾ ತಂಡವು ಕಾರ್ಯಾಚರಣೆ ನಡೆಸಿ ಆರೋಪಿತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿತರನ್ನು ಬಂಧಿಸಿರುವ ತನಿಖಾ ತಂಡ್ ಪೊಲೀಸ್ ಅಧಿಕಾ–ರಿಗಳು ಹಾಗೂ ಸಿಬ್ಬಂದಿಗಳ ಕಾರ್ಯವನ್ನು ಎಸ್ಪಿ ಋಷಿಕೇಶ ಸೋನಾವಣೆ ಅವರು ಶ್ಲಾಘಿಸಿ ಅವರಿಗೆ ಬಹುಮಾನ ಘೋಷಿಸಿದ್ದಾರೆ.

# ಶುಶ್ರೂಶಕರು ಆಸ್ಪತ್ರೆಯ ಬೆನ್ನೆಲುಬು: ಡಾ.ಮಳಖೇಡ್ಕರ್

**ಉದಯರಶ್ಮಿ ನ್ಯೂಸ್**

ವಿಜಯಪುರ: ಒಂದು ಆಸ್ಪತ್ರೆಯು ಅತ್ಯುತ್ತಮ ಸೇವೆ ನೀಡುತ್ತಿದೆ ಎನ್ನುವುದು ನಮಗೆ ತಿಳಿದು ಬರುವುದು ಅಲ್ಲಿರುವ ಸೌಕರ್ಯಗಳಿಗಿಂತ ಅಲ್ಲಿರುವ ಚಿಕಿತ್ಸೆ ಹಾಗೂ ತೆಗದುಕೊಳ್ಳುವ ಕಾಳಜಿಯಿಂದ. ಯಾವ ಆಸ್ಪತ್ರೆಯಲ್ಲಿ ನರ್ಸಿಂಗ್ ಸೇವೆ ಅತ್ಯುತ್ತಮವಾಗಿರುತ್ತದೆಯೋ ಆ ಆಸ್ಪತ್ರೆ ರೋಗಿಗಳ ಪಾಲಿಗೆ ಸಂಜೀವಿನಿಯಾಗಿರುತ್ತದೆ. ಆ ಕಾಣದಿಂದಾಗಿಯೇ ವೈದ್ಯರು ಆಸ್ಪತ್ರೆಯ ಮೆದುಳಾದರೆ ಶುಶ್ರೂಶಕರು ಆಸ್ಪತ್ರೆಯ ಬೆನ್ನೆಲುಬು ಇದ್ದಂತೆ ಎಂದು ಜೆಎಸ್ಎಸ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ತಿಳಿಸಿದರು.



ಸೋಮವಾರ ನಗರದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಶುಶ್ರೂಶಕರ ದಿನಾಚರಣೆಯ ಪ್ರಯುಕ್ತ ರೋಗಿಗಳಿಗೆ ಹಣ್ಣು ಹಾಗೂ ಹೊದಿಕೆಯನ್ನು ವಿತರಿಸಿ ಮಾತನಾಡಿದ ಅವರು; ಯಾವುದೇ ಒಂದು ಆಸ್ಪತ್ರೆಯಾಗಿದ್ದರು ಕೇವಲ ಒಂದೇ ವಿಭಾಗದಿಂದ ಮುಂದೆ ಬರುತ್ತದೆ ಎಂದುಕೊಂಡರೆ ತಪ್ಪಾಗುತ್ತದೆ. ಇಲ್ಲಿ ಯಾವುದೇ ಕಾರ್ಯವಾದರೂ ಕೂಡ ತಂಡಕಾರ್ಯವಾಗಿ ಮಾರ್ಪಡುತ್ತದೆ. ಒಬ್ಬರಿಗೊಬ್ಬರು ಹೆಗಲು ನೀಡಿ ದುಡಿದಾಗ ಮಾತ್ರ ಅತ್ಯುತ್ತಮವಾದ ಸೇವೆ ನೀಡುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲೂ ವೈದ್ಯರು ರೋಗಿಯ ರೋಗವನ್ನು ಪತ್ತೆ ಮಾಡಿ ಅದಕ್ಕೆ ಪೂರಕವಾದ ಚಿಕಿತ್ಸೆಯನ್ನು ತಿಳಿಸಿದ ಮೇಲೆ ಆ ರೋಗಿಯ ಸಂಪೂರ್ಣ ಜವಾಬ್ದಾರಿ ಅಲ್ಲಿನ ಶುಶ್ರೂಶಕರ ಮೇಲೆ ಇರುತ್ತದೆ. ಅದನ್ನು ಅವರು ಸಮರ್ಪಕವಾಗಿ ನಿಭಾಯಿಸಿದಾಗ ಮಾತ್ರ ರೋಗಿಯು ಗುಣಮುಖವಾಗಿ ಹೊರ ಹೋಗುತ್ತಾನೆ. ಈ ನಿಟ್ಟಿನಲ್ಲಿ ನೋಡಲಾಗಿ ಆಸ್ಪತ್ರೆಯಲ್ಲಿ ಶುಶ್ರೂಶಕರ ಕಾರ್ಯ ನಿಜಕ್ಕೂ ಅಮೋಘವಾದುದ್ದು. ಅದರಲ್ಲೂ ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ವ್ಯಕ್ತಿ ಸಂಪೂರ್ಣವಾಗಿ ಸಮರ್ಪಣಾ ಮನೋಭಾವದಿಂದ ಕಾರ್ಯ ಮಾಡಬೇಕಾದ ಕಾರಣ ಇವರ ಸೇವೆಗೆ ಸದಾ ನಾವುಗಳು ಬೆಂಬಲವಾಗಿ ನಿಲ್ಲಬೇಕಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಬೆಂಗಳೂರಿನ ಬಸವರಾಜಸ್ವಾಮಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಪ್ರೋ. ಪ್ರತಿಮಾ ಎಸ್; ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಇಂದು ನರ್ಸಿಂಗ್ ಕ್ಷೇತ್ರವು ಕೂಡ ಬದಲಾಗುತ್ತ ಸಾಗಿದೆ. ಇದರ ಮೂಲಕ ಆಸ್ಪತ್ರೆಯ ಅವಿಭಾಜ್ಯ ಅಂಗವಾಗಿ ನರ್ಸಿಂಗ್ ಸೇವೆ ಗುರುತಿಸಿಕೊಳ್ಳುತ್ತಿದೆ. ವೈದ್ಯರ ರೋಗ ನಿರ್ಧಾರ ಹಾಗೂ ಚಿಕಿತ್ಸಾ ಕ್ರಮ ಎಷ್ಟು ಮುಖ್ಯವಾಗಿದೆಯೋ ಅದಕ್ಕೂ ಮಿಗಿಲಾದ ಕಾರ್ಯ ನರ್ಸಿಂಗ್ ಸಿಬ್ಬಂದಿಗಳ ಮೇಲಿದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ನರ್ಸಿಂಗ್ ಕೋರ್ಸ ಮುಗಿಸಿಕೊಂಡು ಬಂದ ವಿದ್ಯಾರ್ಥಿಗಳು ಅತ್ಯುತ್ತಮವಾದ ಸೇವೆ ಒದಗಿಸುತ್ತಿದ್ದು ಅದಕ್ಕೆ ಪೂರಕವಾದ ವಾತವರಣ ಈಗ ಉತ್ತರ ಕರ್ನಾಟಕದ ನೆಲದಲ್ಲಿಯೇ ನಿರ್ಮಾಣಗೊಳ್ಳುತ್ತಿದೆ. ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಇನ್ನೋರ್ವ ಅತಿಥಿಗಳಾದ ಕಲಬುರ್ಗಿಯ ಶಾರದಾದೇವಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಪ್ರೋ.ಸ್ನೇಹಲತಾ ಪಿ ಅವರು ಮಾತನಾಡಿ; ನಮ್ಮ ರಾಜ್ಯದಲ್ಲಿ ನರ್ಸಿಂಗ್ ತರಬೇತಿಯನ್ನು ಪಡೆದುಕೊಂಡ ವಿದ್ಯಾರ್ಥಿಗಳಿಗೆ ವಿದೇಶದಲ್ಲಿಯೂ ಭಾರೀ ಬೇಡಿಕೆ ಇದೆ. ಅದರಲ್ಲೂ ಇಂದು ಆಸ್ಪತ್ರೆಯ ಗುಣಮಟ್ಟ ನಿರ್ಧಾರಣೆಯಲ್ಲಿ ನರ್ಸಿಂಗ್ ಕೇರ್ ಕೂಡ ಒಂದಾಗಿದ್ದು ನರ್ಸಿಂಗ್ ಸೇವೆಗೆ ಇಂದು ವಿಶೇಷ ಮಾನ್ಯತೆ ಸಿಗುತ್ತಿದೆ. ಇದುವರೆಗೂ ಸಿಸ್ಟರ್ ಹಾಗೂ ಬ್ರದರ್ ಎನ್ನುವ ಸಂಬೋಧನೆಗೆ ಒಳಗಾಗುತ್ತಿದ್ದ ನರ್ಸಗಳು ಇಂದು ನರ್ಸಿಂಗ್ ಆಫಿಸರ್‌ಗಳು ಎಂದು ಕರೆಸಿಕೊಳ್ಳುತ್ತಿದ್ದಾರೆ. ಹೀಗಾಗಿ ಈ ವೃತ್ತಿಗೆ ಬಂದವರು ನಿಜಕ್ಕೂ ಸಂತೃಪ್ತರಾಗುವುದಕ್ಕೆ ಸಾಧ್ಯವಿದೆ. ಹೀಗಾಗಿ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡ ಪ್ರತಿಯೊಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು. ಡಾ.ರವೀಂದ್ರ ತೋಟದ ಹಾಗೂ ಸಿಬ್ಬಂದಿಗಳು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಸುನೀಲ್ ಸೇರಿದಂತೆ ಸರ್ವ ಸಿಬ್ಬಂದಿ ವರ್ಗದವರು ಉಪಸ್ಥಿತ–ರಿದ್ದರು.

# ಚುನಾವಣೆ ಮುಗಿದರೂ ಚುನಾವಣೆ ಧ್ವಜ ಹಾರಾಟ




**ಉದಯರಶ್ಮಿ ನ್ಯೂಸ್**

ಕೆಂಭಾವಿ ಪಟ್ಟಣದಲ್ಲಿ ಲೋಕಸಭಾ ಚುನಾವಣೆ ಮುಗಿದು ಒಂದು ವಾರ ಕಳೆದರೂ ಸಿಬ್ಬಂದಿ ಅವರೋಹಣ ಮಾಡದ್ದರಿಂದ ರಾಜಾರೋಷವಾಗಿ ಚುನಾವಣಾ ಧ್ವಜ ಹಾರಾಡುತ್ತಿದೆ.

ಮಾನ್ಯ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿಯ ಆದೇಶ ಸಮಯ ಬೆಳಿಗ್ಗೆ 7ರಿಂದ ಸಂಜೆ 6 ರವರೆಗೆ ಇದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಕಾರಣ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಎಂದು ಭಾರತೀಯ ದಲಿತ ಪ್ಯಾಂಥರ್ ಸಂಘದ ಅಧ್ಯಕ್ಷ ಲಕ್ಷ್ಮಣ್ ಬಸರಿಗಿಡ ಆಗ್ರಹಿಸಿದ್ದಾರೆ.

# ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಗಿರಥ ಜಯಂತಿ ಆಚರಣೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಂಗಳವಾರ ಬೆಳಿಗ್ಗೆ ಜಿಲ್ಲಾಧಿಕಾ–ರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಭಗಿರಥ ಜಯಂತಿಯನ್ನು ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ನೀತಿ ಸಂಹಿತೆ ಜಾರಿ ಇರುವುದರಿಂದ ಸರಳವಾಗಿ ಆಚ–ರಿಸಲಾಯಿತು. ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಅವರು ಶ್ರೀ ಭಗಿರಥ ಅವರ ಭಾವಚಿತ್ರಕ್ಕೆ ಪೂಜೆಯೊಂದಿಗೆ ಪುಷ್ಪಾರ್ಚನೆಯನ್ನು ಸಲ್ಲಿಸಿ ನಮಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಕವಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಯ್ಯೂಬ್ ದ್ರಾಕ್ಷಿ, ಉಪ್ಪಾರ ಸಮಾಜದ ಜಿಲ್ಲಾ ಅಧ್ಯಕ್ಷರಾದ ಜಕ್ಕಪ್ಪ ಯಡವೆ, ಮುಖಂಡರುಗಳಾದ ಮುತ್ತಪ್ಪ ಕೆ.ಶಿವಣ್ಣನವರ, ಅನಿಲ್ ಅವಳೆ, ಯಲ್ಲಪ್ಪ ಬಂಡಿ, ಡಾ.ಸುರೇಶ ಕಾಗಲಕರ್‌ರೆಡ್ಡಿ, ಸಿದ್ದು ಗೆರಳೆ, ಸಾಬು ಕಾತ್ರಾಳ, ಜೆ.ಎಲ್. ಕಸ್ತೂರಿ, ಶ್ರೀನಿವಾಸ್ ಅಂಬಲಿ, ಸುರೇಶ ಶಹಾಪೂರ, ಪುಂಡಲಿಕ್ ಉಪ್ಪಾರ, ವಿದ್ಯಾವತಿ ಅಂಕಲಗಿ ಹಾಗೂ ಇತರರು ಉಪಸ್ಥಿತರಿದ್ದರು.

# ತಾಯಿ ಹಾಗೂ ಮೂವರು ಮಕ್ಕಳ ಪತ್ತೆಗೆ ಮನವಿ

**ಉದಯರಶ್ಮಿ ನ್ಯೂಸ್**




ವಿಜಯಪುರ: ಕೊಲ್ಹಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಂದ್ರಭಾಗಾ ವಿಠ್ಠಲ ಹುಗ್ಗೆನವರ(30 ವರ್ಷ) ಹಾಗೂ ಆಕೆಯ ಮಕ್ಕಳಾದ ಪ್ರಥಮ(11 ವರ್ಷ), ಸಜನಿ(9 ವರ್ಷ), ಸಾನವಿ(7 ವರ್ಷ) ರವರನ್ನು ಅಪಹರಣ ಮಾಡಲಾಗಿದೆ ಎಂದು ದೂರು ದಾಖಲಾಗಿದೆ. ಅಬ್ದುಲ್‌ಗಫಾರ ನೂರಲಿಖಾನ ಕಲಾದಗಿ ಎಂಬ ವ್ಯಕ್ತಿಯು ತಾಯಿ ಮಕ್ಕಳನ್ನು ಅಪಹರಣ ಮಾಡಿದ್ದಾನೆ ಎಂದು ಅಪಹರಣಗೊಂಡ ಮಹಿಳೆಯ ಚಿಕ್ಕಪ್ಪನಾದ ಲಕ್ಷ್ಮಣ ಬಸಲಿಂಗಪ್ಪ ಬ್ಯಾಲ್ಯಾಳ ಇವರು ದೂರು ದಾಖಲಿಸಿದ್ದಾರೆ.

ಅಪಹರಣಗೊಂಡ ತಾಯಿ ಹಾಗೂ ಮಕ್ಕಳ ಬಗ್ಗೆ ಸುಳಿವು ಅಥವಾ ಗುರುತು ಪತ್ತೆಯಾದಲ್ಲಿ ಹತ್ತಿರದ ಪೊಲೀಸ್ ಠಾಣೆ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ–ರಿಯವರ ಕಚೇರಿ 08352–250152 ಮೊಬೈಲ್ ಸಂಖ್ಯೆ 9480804201, ವಿಜಯಪುರ ಕಂಟ್ರೋಲ್ ರೂಮ್ ನಂ. 08352–250844,250751, ಡಿಎಸ್‌ಪಿ ಬಸವನ ಬಾಗೇವಾಡಿ ಇವರ ಮೊಬೈಲ್ ನಂಬರ್ 9480804221 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಬಸವನ ಬಾಗೇವಾಡಿಯ ಪೊಲೀಸ್ ಉಪ ವಿಭಾಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾಷ್ಟಿಕತೆ ಮತ್ತು ನಮ್ರತೆ

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಅದೊಂದು ಬೃಹತ್ತಾದ ಕಾಡು. ಅ ಕಾಡಿನ ಹಾದಿಯಾಗಿ ಸುತ್ತು ಹಾಕಿ ಬಸವಳಿದು ಬಾಯಾರಿದ ಆ ವ್ಯಕ್ತಿ ಕಾಡಂಚಿನ ಊರಿಗೆ ಬಂದು ತಲುಪಿದ. ಊರ ಹೊರಗಿನ ಬಾವಿಯಲ್ಲಿ ನೀರು ಸೇದುತ್ತಿದ್ದ ಓರ್ವ ಮಹಿಳೆಯನ್ನು ಕಂಡು ತನಗೆ ತುಂಬಾ ಬಾಯಾರಿಕೆಯಾಗಿದ್ದು ಕುಡಿಯಲು ನೀರು ಕೊಡಲು ಕೇಳಿದ.

ತಲೆ ಕೂದಲು ನೆರೆತ, ಬೊಚ್ಚು ಬಾಯಿಯ ಆ ವೃದ್ಧ ಹೆಣ್ಣು ಮಗಳು "ನೀರನ್ನು ನಾನು ಕೊಡುವೆ, ಆದ–ರೆ ನಿನ್ನ ಪರಿಚಯವನ್ನು ಹೇಳು" ಎಂದಳು.

ಆ ಕಾಲದ ಅತ್ಯಂತ ಪ್ರಸಿದ್ಧ ಕವಿ ಮತ್ತು ವಿದ್ವಾಂಸನಾಗಿದ್ದ ಆ ವ್ಯಕ್ತಿ ತನ್ನ ಪರಿಚಯ ಹೇಳಿದರೆ ತಿಳಿದುಕೊಳ್ಳುವಷ್ಟು ಯೋಗ್ಯತೆ ಆ ವೃದ್ಧ ಹಳ್ಳಿಯ ಹೆಣ್ಣುಮಗಳಲ್ಲಿ ಇಲ್ಲ ಎಂದುಕೊಂಡು "ನಾನು ಓರ್ವ ಪಥಿಕ, ಈ ದಾರಿಯ ಮೂಲಕ ಮುಂದಿನ ಊರಿಗೆ ಹೋಗುತ್ತಿರುವ ದಾರಿಹೋಕ" ಎಂದು ಹೇಳಿದನು.

ಇದೀಗ ವೃದ್ಧ ಹೆಣ್ಣು ಮಗಳು ಮೆಲುವಾಗಿ ನಕ್ಕು ಈ ಪ್ರಪಂಚದಲ್ಲಿ ಕೇವಲ ಇಬ್ಬರೇ ಪಥಿಕರಿರುವುದು ಸೂರ್ಯ ಮತ್ತು ಚಂದ್ರ. ಅವ–ರಿಬ್ಬರೂ ಪ್ರತಿದಿನ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವರು, ಅದೆಷ್ಟೇ ಎಡರು ತೊಡರುಗಳು ಬಂದರೂ ತಮ್ಮ ಕರ್ತವ್ಯವನ್ನು ನಿರ್ವಹಿಸುವವರು ಅವರಿಬ್ಬರೇ..... ನೀನು ಪಥಿಕನಲ್ಲ.... ಆದ್ದರಿಂದ ನೀನು ಯಾರು ಎಂಬುದನ್ನು ಸರಿಯಾಗಿ ಹೇಳು ಎಂದು ಹೇಳಿದಳು.

ಹಾಗಾದರೆ ನಾನು ಅತಿಥಿ ಎಂದು ತಿಳಿದುಕೋ

ಎಂದು ಆ ವಿದ್ವಾಂಸನು ಮಾರುತ್ತರ ನೀಡಿದನು.

ಅದಕ್ಕೆ ಆ ವೃದ್ದೆಯು ಈ ಜಗತ್ತಿನಲ್ಲಿ ಅತಿಥಿಗಳು ಕೇವಲ ಇಬ್ಬರೇ. ಯೌವನ ಮತ್ತು ದುಡ್ಡು. ಅವರಿಬ್ಬರೂ ಶಾಶ್ವತವಲ್ಲ. ಅದೆಷ್ಟೇ ನೀನು ಪ್ರಯತ್ನ ಪಟ್ಟರೂ, ಪೀಡಿಸಿದರೂ ಅವರು ನಿನ್ನ ಬಳಿ ಉಳಿಯುವುದಿಲ್ಲ ಆದ್ದರಿಂದ ನೀನಾರು? ಎಂಬುದನ್ನು ಹೇಳು ಎಂದು ಪ್ರಶ್ನಿಸಿದಳು.

ವೃದ್ಧೆಯ ಉತ್ತರದಿಂದ ಚಕಿತನಾದ ವಿದ್ವಾಂಸನು ನಾನು ಒಬ್ಬ ತಾಳ್ಮೆಯುಳ್ಳ ವ್ಯಕ್ತಿ ಎಂದು ಉತ್ತರಿಸಿದನು.

ಮತ್ತೆ ಮೆಲು ನಕ್ಕ ವೃದ್ಧ ಹೆಣ್ಣು ಮಗಳು ನೀನು ಅಷ್ಟೊಂದು ತಾಳ್ಮೆಯುಳ್ಳ ವ್ಯಕ್ತಿ ಎಂದು ನನಗೆ ಅನ್ನಿಸುತ್ತಿಲ್ಲ. ಈ ಪ್ರಪಂಚದಲ್ಲಿ ಭೂಮಿ ತಾಯಿ ಮತ್ತು ಗಿಡಮರಗಳು ಮಾತ್ರ ತಾಳ್ಮೆಯನ್ನು ಹೊಂದಿವೆ. ಈ ಭೂಮಿ ತಾಯಿ ನಮ್ಮ ಅದೆಷ್ಟೋ ಅತ್ಯಾಚಾರಗಳನ್ನು ಸಹಿಸಿ ನಮ್ಮನ್ನು ಮಗುವಿನಂತೆ ಪೊರೆಯುತ್ತಾಳೆ... ಇನ್ನು ಗಿಡ ಮರಗಳು ತಮ್ಮ ಬದುಕಿನುದ್ದಕ್ಕೂ ನಮಗೆ ನೆರಳು, ಹಣ್ಣು ಹೂಗಳನ್ನು ಕೊಡುತ್ತವೆ.... ನಾವು ಕಲ್ಲೆಸೆದಾಗ್ಯೂ ಕೂಡ. ಈಗ ಹೇಳು ನೀನ್ಯಾರು ಎಂದು? ಎಂದು ಪ್ರಶ್ನಿಸಿದಳು.

ಈಗಾಗಲೇ ಬಾಯಾರಿ ಬಸವಳಿದಿದ್ದ ಆ ವ್ಯಕ್ತಿ ಕೊಂಚ ಅಸಹನೆಯಿಂದಲೇ ಹಾಗಾದರೆ ನನ್ನನ್ನು ಓರ್ವ ಮೊಂಡ ಎಂದು ತಿಳಿದುಕೊಂಡು ನೀರು ಹನಿಸಿ ಪುಣ್ಯ ಕಟ್ಟಿಕೋ ಎಂದು ಹೇಳಿದನು.

ನಸುನಗುತ್ತಾ ಆ ವೃದ್ದ ಹೆಣ್ಣು ಮಗಳು ಈ ಜಗತ್ತಿನಲ್ಲಿ ಕೇವಲ ಎರಡು ವಸ್ತುಗಳಲ್ಲಿ ಮೊಂಡತನವಿದೆ. ಅವು ಕೂದಲು ಮತ್ತು ಉಗುರುಗಳು. ಅದೆಷ್ಟೇ ಕತ್ತರಿಸಿದರೂ ಮತ್ತೆ ಮತ್ತೆ ಬೆಳೆಯುವ ಕೂದಲು ಮತ್ತು ಉಗುರುಗಳಷ್ಟು ಮೊಂಡುತನ ಬೇರೆ ಯಾವುದೇ ವಸ್ತುಗಳಿಗೆ ಇಲ್ಲ. ಈಗ ಹೇಳು ನೀನು ಯಾರು?? ಎಂದು ಮತ್ತೆ ಆಕೆ ಕೇಳಿದರು.

ಬಾಯಾ–ರಿಕೆಯಿಂದ ಬಳಲಿದ್ದ ಆ ದಾರಿಹೋಕ ತುಸು ಅಸಹನೆಯಿಂದಲೇ ನಿನ್ನನ್ನು ನೀರು ಕೇಳುತ್ತಿರುವ ನಾನು ಒಬ್ಬ ಮೂರ್ಖ ಎಂದು ತಿಳಿದುಕೋ ಎಂದು ಕೊಂಚ ಸಿಡುಕುತ್ತಲೇ ಹೇಳಿದನು.




ಮತ್ತೆ ಆ ವೃದ್ಧ ಮಹಿಳೆ ಈ ಜಗತ್ತಿನಲ್ಲಿ ಮೂರ್ಖರು ಕೇವಲ ಇಬ್ಬರು ಇದ್ದಾರೆ. ಯಾವುದೇ ಯೋಗ್ಯತೆಗಳು ಇಲ್ಲದೆ ತನ್ನ ಹಿರಿಯರಿಂದ ಬಳುವಳಿಯಾಗಿ ಬಂದ ರಾಜ್ಯವನ್ನು ಆಳುತ್ತಿರುವ ರಾಜ ಮತ್ತು ಆ ರಾಜನನ್ನು ಹೊಗಳಿ ಹೊನ್ನಶೂಲಕ್ಕೆ ಏರಿಸುವ ಮಂತ್ರಿ. ಅದೆಷ್ಟೇ ಅಭಿವೃದ್ಧಿ ಹೊಂದಿದ ರಾಜ್ಯವಾದರೂ ಅದರ ಅವನತಿಗೆ ಒಬ್ಬ ಮೂರ್ಖ ರಾಜ ಮತ್ತು ಓರ್ವ ಮೂರ್ಖ ಮಂತ್ರಿ ಕಾರಣರಾಗುತ್ತಾರೆ ಎಂದರೆ ನೀನು ನಂಬಲಿಕ್ಕಿಲ್ಲ.ಈಗ ಹೇಳು ನೀನ್ಯಾರು?? ಎಂದು ಮತ್ತೆ ಕೇಳಿದಳು.

ಇದೀಗ ಆ ವಿದ್ವಾಂಸನ ಕಣ್ತೆರೆದಂತಾಯಿತು. ಓರ್ವ ಹಳ್ಳಿಯ ಏನು ಅರಿಯದವಳು ಎಂದುಕೊಂಡ ಅನಕ್ಷರಸ್ಥ ಹೆಣ್ಣು ಮಗಳ ಜಾಣ್ಮೆ ಮತ್ತು ತಿಳುವಳಿಕೆಯನ್ನು ಕಂಡು ಆತನಿಗೆ ಆಶ್ಚರ್ಯವಾಗುವುದರ ಜೊತೆ ಜೊತೆಗೆ ತನ್ನ ಅರಿವಿನ ಕುರಿತಾದ ಹೆಮ್ಮೆ ಕರಗಿಹೋಯಿತು.

ಕೂಡಲೇ ನತಮಸ್ತಕನಾದ ಆ ವಿದ್ವಾಂಸನು ಆಕೆಯ ಕಾಲುಗಳಿಗೆರಗಿ

" ಅವಮ್ಮಾ, ನನ್ನನ್ನು ಕ್ಷಮಿಸಿಬಿಡು. ನಾನು ಓರ್ವ ವಿದ್ವಾಂಸ ಎಂಬ ಹಮ್ಮಿನಲ್ಲಿದ್ದೆ. ನನ್ನ ಪಾಂಡಿತ್ಯವು ನನ್ನ ಕಣ್ಣುಗಳಿಗೆ ಅಹಂಕಾರದ ಪೊರೆಯನ್ನು ಉಂಟು ಮಾಡಿತ್ತು. ಆದ್ದರಿಂದಲೇ ಜಗತ್ತಿನ ಉಳಿದೆಲ್ಲರೂ ನನ್ನ ಪಾಲಿಗೆ ನಗಣ್ಯರೆನಿಸಿದ್ದರು. ಇದೀಗ ನೀನು ನನ್ನ ಕಣ್ಣು ತೆರೆಸಿದೆ. ನನ್ನನ್ನು ಕ್ಷಮಿಸಿ ಬಿಡು ತಾಯಿ.... ದಯವಿಟ್ಟು ನೀರು ಹನಿಸಿ ಪುಣ್ಯಕಟ್ಟಿಕೋ" ಎಂದು ಆಕೆಯ ಪಾದಗಳಿಗೆ ಎರಗಿದನು.

ಆದರೆ ಏನಾಶ್ಚರ್ಯ!!! ಹಾಗೆ ಕಾಲುಗಳಿಗೆರಗಿದ ವಿದ್ವಾಂಸನನ್ನು ಭುಜ ಹಿಡಿದು ಮೇಲೆತ್ತಿದ ಆ ತಾಯಿಯನ್ನು ನೋಡಿದ ಆ ವಿದ್ವಾಂಸನ ಬಾಯಿಂದ ಮಾತುಗಳೇ ಹೊರಡಲಿಲ್ಲ.... ಕಾರಣ ಹಾಗೆ ಮೇಲೆತ್ತಿದಾಗ ಆತ ಕಂಡದ್ದು ವಿದ್ಯೆ ಮತ್ತು ಜಾಣ್ಮೆಯ ಅಧಿದೇವತೆ ಸಾಕ್ಷಾತ್ ಸರಸ್ವತಿ ದೇವಿಯನ್ನು. ಅಪ್ರತಿಭನಾಗಿ ಮತ್ತೊಮ್ಮೆ ಆಕೆಯ ಕಾಲಿಗೆರಗಿದ ಆತನನ್ನು ಕುರಿತು ಆಕೆ ಹೀಗೆ ಹೇಳಿದಳು



" ಕಂದ, ನಿನ್ನನ್ನು ನೀನು ಅರಿತರೆ ಮಾತ್ರ ನೀನು ಓರ್ವ ಮನುಷ್ಯನಾಗುವೆ. ಅಹಂಕಾರದ ಪೊರೆ ನಿನ್ನ ಜ್ಞಾನ ಚಕ್ಷುಗಳನ್ನು ಮುಚ್ಚಿ ಹಾಕಿತ್ತು. ನಿನ್ನ ಮಾನವೀಯತೆಯ ಮುಖ ಪ್ರಕಟವಾಗುವುದು ನೀನು ಕೇವಲ ವಿದ್ಯಾವಂತನಾಗಿದ್ದರೆ ಅಲ್ಲ ಆ ವಿದ್ಯೆಯೊಂದಿಗೆ ವಿನಯವು ಕೂಡ ಮಿಳಿತವಾಗಿರಬೇಕು"

ವಿದ್ಯೆಗೆ ವಿನಯವೇ ಭೂಷಣ ಎಂಬುದರ ಅರಿವು ಮೂಡಿಸಲೆಂದೇ ನಾನಿಲ್ಲಿ ಬಂದದ್ದು ಎಂದು ವಿದ್ಯಾದಾತೆ ಹೇಳಿದಾಗ ಆ ವಿದ್ವಾಂಸನು ತಲೆತಗ್ಗಿಸಿ ಆಕೆಗೆ ತನ್ನನ್ನು ಕ್ಷಮಿಸು ಎಂದು ಆಗ್ರಹಿಸಿದನು. ಪ್ರೀತಿನಿಂದ ಆತನ ತಲೆಯನ್ನು ಸವರಿ ವಿನಮ್ರತೆಯ ಪಾಠವನ್ನು ಹೇಳಿದ ಆ ವೃದ್ಧ ಮಾತೆ ಸಾಕ್ಷಾತ್ ಸರಸ್ವತಿ ದೇವಿ ಮತ್ತು ಹಾಗೆ ಆಕೆಯ ಬಳಿ ಕ್ಷಮೆ ಕೇಳಿದ ಆ ಮಹಾನ್ ವಿದ್ವಾಂಸನೆ ಸಂಸ್ಕೃತದ ಅತಿ ದೊಡ್ಡ ವಿದ್ವಾಂಸ, ಬೋಜರಾಜನ ಸ್ನೇಹಿತ, ಶಾಕುಂತಲ, ಮೇಘದೂತ ಮುಂತಾದ ಬೃಹತ್ ಕೃತಿಗಳನ್ನು ರಚಿಸಿದ ಕವಿರತ್ನ ಎಂದೆ ಹೆಸರಾದ ಮಹಾನ್ ಕವಿ ಕಾಳಿದಾಸ.

# ಬೆಳೆಹಾನಿ ಪರಿಹಾರ: 2.50 ಲಕ್ಷ ರೈತರ ಖಾತೆಗೆ ಹಣ ಜಮೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಎಲ್ಲ ತಾಲೂಕುಗಳನ್ನು ಈಗಾಗಲೇ ಸರ್ಕಾರ ಬರಪೀಡಿತ ತಾಲೂಕುಗಳೆಂದು ಘೋಷಿಸಿದ್ದು, ಬೆಳೆಹಾನಿಯಾದ ರೈತರ ಖಾತೆಗಳಿಗೆ ನೇರವಾಗಿ ಡಿಬಿಟಿ ಮೂಲಕ ಪರಿಹಾರ ಹಣ ಜಮೆ ಮಾಡಲಾಗುತ್ತಿದ್ದು, ಜಿಲ್ಲೆಯಲ್ಲಿ 36010.20 ಲಕ್ಷ ರೂ.ಗಳನ್ನು 2,50,063 ರೈತರಿಗೆ ಜಮೆ ಮಾಡಲಾಗಿದೆ. ರೈತರು ತಮ್ಮ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನ ಜಮೆಯಾಗಿರುವ ಕುರಿತುಣಣಥಿ://ಔಚಿಡಿಟಿಜಿಡಿಚಿ. ಞಚಿಡಿಟಿಚಿಣಚಿಞಚಿ.ರಠತ.ಟಿ/ ಜಡಿತುಥಿಜ92/ ಜಾಲತಾಣದಿಂದ ಪರಿಶೀಲಿಸಬಹುದಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ.

ಸಹಾಯವಾಣಿ : ಜಿಲ್ಲಾಧಿಕಾರಿಗಳ ಕಚೇರಿ ವಿಜಯಪುರ ದೂ: 08352–221261 ಹಾಗೂ ಟೋಲ್ ಫ್ರೀ ಸಂಖ್ಯೆ 1077, ಉಪವಿಭಾಗಾಧಿಕಾರಿಗಳು ವಿಜಯಪುರ ದೂ: 083521–295286, ಉಪವಿಭಾಗಾಧಿಕಾರಿಗಳು ಇಂಡಿ ದೂ: 08359–225003, ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ವಿಜಯಪುರ ದೂ: 08352–250244, ತಹಶೀಲ್ದಾರ ವಿಜಯಪುರ ದೂ:08352–355731, ತಹಶೀಲ್ದಾರ ಬಬಲೇಶ್ವರ ದೂ: 8310504205, 9686073390, ತಹಶೀಲ್ದಾರ ತಿಕೋಟಾ ದೂ: 8762480811, 9480532696, ತಹಶೀಲ್ದಾರ ಬ.ಬಾಗೇವಾಡಿ ದೂ:8050426663, 9108482599, ತಹಶೀಲ್ದಾರ ನಿಡಗುಂದಿ ದೂ: 7019178075,9902634186, ತಹಶೀಲ್ದಾರ ಕೊಲ್ಹಾರ ದೂ: 08426–200252, ತಹಶೀಲ್ದಾರ ಮುದ್ದೇಬಿಹಾಳ ದೂ: 08356–220227, ತಹಶೀಲ್ದಾರ ತಾಳಿಕೋಟೆ ದೂ:9449752854, ತಹಶೀಲ್ದಾರ ಇಂಡಿ ದೂ:08359–225020, ತಹಶೀಲ್ದಾರ ಚಡಚಣ ದೂ: 9483952337,9740183529, ತಹಶೀಲ್ದಾರ ಸಿಂದಗಿ ದೂ:08488–221235, ತಹಶೀಲ್ದಾರ ದೇವರಹಿಪ್ಪರಗಿ ದೂ: 08424–283222, ತಹಶೀಲ್ದಾರ ಆಲಮೇಲ ದೂ: 7353343228 ಇದಲ್ಲದೇ ವಿಪತ್ತು ನಿರ್ವಹಣೆಗಾರರ ದೂ: 7019682740 ಸಂಖ್ಯೆಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಬೆಳೆ ಹಾನಿ ಪರಿಹಾರ ಪಡೆದುಕೊಳ್ಳಲು ಫ್ರೂಟ್ಸ್ ಐಡಿ ಕಡ್ಡಾಯವಾಗಿರುವುದರಿಂದ ಇದುವರೆಗೆ ಫ್ರೂಟ್ಸ ಐಡಿ ಮಾಡಿಕೊಳ್ಳದ ರೈತರು ಕೂಡಲೇ ತಮ್ಮ ಆಧಾರ, ಬ್ಯಾಂಕ್ ಖಾತೆ ವಿವರ ಹಾಗೂ ಪಹಣಿ ಮಾಹಿತಿಯನ್ನು ಗ್ರಾಮ ಆಡಳಿತ ಅಧಿಕಾರಿಗಳಿಗೆ ಅಥವಾ ಸಮೀಪದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಫ್ರೂಟ್ಸ್ ಐಡಿ ಮಾಡಿಕೊಳ್ಳಲು ಮನವಿ ಮಾಡಿಕೊಳ್ಳಲಾಗಿದ್ದು, ಫ್ರೂಟ್ಸ್ ಐಡಿ ಇಲ್ಲದ ರೈತರು ಪರಿಹಾರ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಪ್ಪಾರ ಸಮಾಜ ರಾಜಕೀಯ ವಂಚಿತ ಸಮಾಜ :ಕರಂಡೆ



**ಉದಯರಶ್ಮಿ ನ್ಯೂಸ್**

ಇಂಡಿ: ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ವಂಚಿತರಿಂದ ಉಪ್ಪಾರ ಸಮಾಜ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ ಎಂದು ಭಗೀರಥ ಮಹರ್ಷಿ ಸಮಾಜ ಸೇವಾ ಸಂಘದ ತಾಲ್ಲೂಕು ಅಧ್ಯಕ್ಷ ಸುರೇಶ ಕರಂಡೆ ಹೇಳಿದರು.

ಮಂಗಳವಾರ ಭಗೀರಥ ಮಹರ್ಷಿ ಜಯಂತಿ ಅಂಗವಾಗಿ ತಾಲ್ಲೂಕಿನ ಹಿರೇರೂಗಿ ಗ್ರಾಮ ಪಂಚಾಯತ, ಕೃಷಿ ಪತ್ತಿನ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಹಾಗೂ ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಭಗೀರಥ ಮಹರ್ಷಿ ವೃತದಲ್ಲಿ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ಹೇರುವುದನ್ನು ತಡೆಯಲು ಉಪ್ಪಾರ ಜನಾಂಗ ಮಹಾತ್ಮಾ ಗಾಂಧೀಜಿಯೊಂದಿಗೆ ಗುಜರಾತಿನಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ತೊಡಗಿದ್ದರು. ಈ ಹೋರಾಟ ದೇಶವನ್ನು ಸ್ವತಂತ್ರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಅದರಲ್ಲಿ ಉಪ್ಪಾರರ ಸೇವೆ ಸ್ಮರಣೀಯ ಎಂದರು.

ತಾಯಿ, ಉಪ್ಪಿನ ಋಣ ತೀರಿಸಲು ಸಾಧ್ಯವಿಲ್ಲ ಎಂಬಂತೆ ಉಪ್ಪಿನ ಋಣ ಎಲ್ಲ ಸಮಾಜದ ಮೇಲಿದೆ. ಆದರೆ ಸದ್ಯ ಸಮಾಜಕ್ಕೆ ರಾಜಕೀಯ ಸ್ಥಾನಮಾನ ಸಿಗದೆಯಿರುವುದರಿಂದ ಪ್ರಗತಿ ಕಾಣದಂತಾಗಿದೆ. ಎಲ್ಲಿಯವರೆಗೆ ರಾಜಕೀಯ ಅವಕಾಶ ಸಿಗುವುದಿಲ್ಲವೋ..! ಅಲ್ಲಿಯವರೆಗೆ ಸಮಾಜ ತುಳಿತಕ್ಕೆ ಕಾರಣವಾಗುತ್ತದೆ. ಹಾಗಾಗಿ ಜನಪ್ರತಿನಿಧಿಗಳು ಹಾಗೂ ಸರಕಾರ ಈ ಸಮಾಜವನ್ನು ಗುರುತಿಸಿ ಮುಖ್ಯ ವಾಹಿನಿಗೆ ಬರಲು ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಕೊಡಬೇಕು ಎಂದು ಮನವಿ ಮಾಡಿಕೊಂಡರು.

ಇನ್ನು ತಾ.ಪಂ ಮಾಜಿ ಉಪಾಧ್ಯಕ್ಷ ಸೋಮಶೇಖರ್ ಬ್ಯಾಳಿ, ರಮೇಶ್ ಕಲ್ಯಾಣಿ, ಡಾ. ಸಂಜೀವ ಮೊಟಗಿ ಮಾತನಾಡಿ, ಸಮಾಜ ಸುಧಾರಣೆಯಲ್ಲಿ ಯುವಕರ ಪಾತ್ರ ಪ್ರಮುಖ. ದುಶ್ಚಟಗಳಿಗೆ ದಾಸರಾಗದೆ ಇತರರಿಗೆ ಮಾದರಿಯಾಗಿ ಬದುಕಿ ಎಂದರು.

ಈ ಸಂದರ್ಭದಲ್ಲಿ ಅಂಬಿಕಾ ಮಳಸಿದ್ದ ಚನಗೊಂಡ, ಪರಶುರಾಮ ಹತ್ತರಕಿ, ಚಿದಾನಂದ ಉಪ್ಪಾರ, ಶಂಕರ ಪೂಜಾರಿ, ಸುರೇಶ ಡೊಂಗ್ರೋಜ್, ಗ್ರಾ.ಪಂ ಸದಸ್ಯ ಅನೀಲ ರೆಬಿನಾಳ, ಶೀವು ಉಪ್ಪಾರ, ಮಳ್ಳು ಗಬ್ಬೂರು, ಮಲ್ಲು ತೇರಿ, ರವಿ ಮಸಳಿ, ಅಣ್ಣರಾಯ ಮದರಿ, ಮಲ್ಲು ನಂದ್ಯಾಳ, ಜಕ್ಕಪ್ಪ ಉಪ್ಪಾರ, ಸದಾಶಿವ ನರಳೆ, ಕಲ್ಲಪ್ಪ ಕರಂಡೆ, ಜಟ್ಟಪ್ಪ ಉಪ್ಪಾರ, ನಿಂಗು ಬಿರಾದಾರ, ಸಂತೋಷದ ಅಗರಖೇಡ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಡಾ.ಫ.ಗು. ಹಳಕಟ್ಟಿ ಕೇಂದ್ರ :ಮೇ16ರಂದು ಕಾರ್ಯಾಗಾರ

**ಉದಯರಶ್ಮಿ ನ್ಯೂಸ್**

ವಿಜಯಪುರ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ವತಿಯಿಂದ ಮೇ.16ರಂದು ಬಿ.ಎಲ್.ಡಿ.ಇ ಸಂಸ್ಥೆಯ ಆವರಣದಲ್ಲಿರುವ ಡಾ.ಫ.ಗು. ಹಳಕಟ್ಟಿ ಇಂಜಿನಿಯರಿಂಗ ಕಾಲೇಜಿನ ಸಭಾಗೃಹದಲ್ಲಿ **“Navigating Youth Towards Amrutha Kal: Knowledge Transfer Through Technology and Skill Development”** ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬೆಳಗಾವಿಯ ಶ್ರೀನಿವಾಸ ಪಿ ಇವರು Revolutionising Artificial Intelligence in Knowledge Trnasfer ಎಂಬ ವಿಷಯದ ಕುರಿತು, ಐಐಟಿ ದೆಹಲಿಯ ಡಿ.ಎಸ್ .ಮಂಜುನಾಥ ಇವರು ToC Critical Chain-Theory of Constraints Tools Industry 4.0 Innovation, ಎಂಬ ವಿಷಯದ ಕುರಿತು, ಎಆರ್‌ಕೆ ವೈಡ್ ಇಂಡಸ್ಟ್ರೀಸ್ ಬೆಂಗಳೂರ ಇದರ ಡೈರೆಕ್ಟರ ಆದ ಸೂರಜ ಪಿ.ನಾಡಿಗ , ಇವರು Empowering Institutions Through Skill Development and Entrepreneurship ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ.

ಕಾರ್ಯಾಗಾರದ ಅಧ್ಯಕ್ಷತೆಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೋ.ಸಿ.ಎಂ.ತ್ಯಾಗರಾಜ ಅವರು ವಹಿಸಲಿದ್ದಾರೆ. ಕುಲಸಚಿವರಾದ ರಾಜೇಶ್ವರಿ ಜೈನಾಪೂರ, ಮತ್ತು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಮತ್ತು ಕಾರ್ಯಾಗಾರದ ಸಂಯೋಜಕರಾದ ಪ್ರೋ.ಎಸ್.ಎಂ ಗಂಗಾಧರಯ್ಯಾ ಇವರು ಉಪಸ್ಥಿತರಿರುತ್ತಾರೆ ಎಂದು ಡಾ.ಫ.ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಪಾಯದಲ್ಲಿ ಸರಕಾರಿಶಾಲೆಗಳು । ಮಕ್ಕಳು ಪೋಷಕರಲ್ಲಿ ಆತಂಕ । ಕೆಲವೆಡೆ ರೂಂಗಳು ಅಧ್ವಾನ

# ದುರಸ್ಥಿಗೆ 50 ಕ್ಕೂ ಹೆಚ್ಚು ಶಾಲಾ ಕೊಠಡಿಗಳು :ಅಪಾಯದ ಭೀತಿ



**ಉದಯರಶ್ಮಿ ನ್ಯೂಸ್**

ಇಂಡಿ: ಸರಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ, ದಾಖಲಾತಿ ಆಂದೋಲನ ಎಂದೆಲ್ಲ ದುಡಿಯುತ್ತಿರುವ ಶಿಕ್ಷಣ ಇಲಾಖೆಯೂ ತನ್ನ ಸರಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾರ್ಯವನ್ನೇ ಮರೆತಿದ್ದು ತಾಲೂಕಿನಲ್ಲಿ 50 ಕ್ಕೂ ಹೆಚ್ಚು ಕೊಠಡಿಗಳು ಶಿಥಿಲಾವಸ್ತೆ ತಲುಪಿ ಈ ವರೆಗೂ ದುರಸ್ತಿ ಭಾಗ್ಯವನ್ನೇ ಕಾಣ ದಂತಾಗಿದೆ.

ಇಂಡಿ ತಾಲೂಕಿನಲ್ಲಿ 278 ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿದ್ದು ಅದರಲ್ಲಿ 18 ಸರಕಾರಿ ಪ್ರೌಢಶಾಲೆಗಳಿವೆ. ಇದರಲ್ಲಿ 30 ಕ್ಕೂ ಹೆಚ್ಚು ಮೇಜರ್ ರಿಪೇರಿ ಆಗಬೇಕಾಗಿದ್ದು 20 ಕ್ಕೂ ಹೆಚ್ಚು ಕೊಠಡಿಗಳು ಮೈನರ್ ರಿಪೇರಿ ಆಗಬೇಕಿದೆ. ಹೀಗಾಗಿ ಇಷ್ಟು ಶಾಲೆಗಳ ಕೊಠಡಿ ಗಳಲ್ಲಿ ಓದುವ ಮಕ್ಕಳ ಜೀವ ಕೈಯಲ್ಲಿ ಹಿಡಿದುಕೊಂಡು ಓದಬೇಕಿದೆ.

ಪ್ರತಿ ವರ್ಷವೂ ಕೊಠಡಿಗಳ ಗುಣಮಟ್ಟದ ಬಗ್ಗೆ ರಿಪೋರ್ಟ ಕಾರ್ಡು ಸಿದ್ಧ ಪಡಿಸುವ ಶಿಕ್ಷಣ ಇಲಾಖೆ ಸರಕಾರಕ್ಕೆ ವರದಿ ಸಲ್ಲಿಸುತ್ತದೆ. ಆದರೆ ಈ ವರೆಗೂ ಕೊಠಡಿಗಳ ದುರಸ್ತಿಗೆ ಜಾಣಮೌನ ವಹಿಸಿರುವದು ವಿಪರ್ಯಾಸ

ಮೇಜರ ಸಮಸ್ಯೆ: 50 ಕೊಠಡಿಗಳಲ್ಲಿ ಮೇಜರ ರಿಪೇರಿ ಕೆಲಸಗಳು ನಡೆಯಬೇಕಿದೆ.ಇಲ್ಲಿ ಗೋಡೆಗಳು ಬಿರುಕು ಬಿಟ್ಟಿದ್ದು ಚಾವಣಿ ಸಹ ಉದುರುವದು ಸರ್ವೆ ಸಾಮಾನ್ಯ ಎನ್ನುವಂತಾಗಿದೆ. ಕೊಠಡಿಗಳು ಕುಸಿಯುವ ಹಂತ ತಲುಪಿದ್ದು ಮಕ್ಕಳ ಜೀವದ ಜತೆ ಶಿಕ್ಷಣ ಇಲಾಖೆ ಚೆಲ್ಲಾಟವಾಡುವ ಸ್ಥಿತಿ ನಿರ್ಮಾಣವಾಗಿದೆ. ಇನ್ನು ಮೈನರ್ ರಿಪೇರಿ ನಡೆಯ ಬೇಕಿರುವ 20 ಕೊಠಡಿಗಳಲ್ಲಿ ಸಣ್ಣ ಪುಟ್ಟ ತೇಪೆ ಕೆಲಸಗಳು ವಿದ್ಯುತ್ ವೈರ್ ಕಡಿತ ಗಾರೆ, ಪ್ಲಾಸ್ಟಿಂಗ ಉದುರುತ್ತಿರುವ ಪ್ರಕರಣಗಳೇ ಹೆಚ್ಚಾಗಿವೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ವಿದ್ಯಾರ್ಥಿನಿ ಸಹ ಸರಕಾರಿ ಶಾಲೆಯ ವಿದ್ಯಾರ್ಥಿಯೇ ಆಗಿದ್ದಾಳೆ. ಗುಣಮಟ್ಟದ ಶಿಕ್ಷಣದಲ್ಲಿ ರಾಜ್ಯದ ಸರಕಾರಿ ಶಾಲೆಯೇ ಬೆಸ್ಟ. ಆದರೆ ಕೆಲ ತಾಲೂಕಿನ ಶಾಲೆಗಳು ಕೊಠಡಿಗಳು ಬೀಳುವ ಹಂತ ತಲುಪಿರುವದು ವಿಪರ್ಯಾಸ. ಒಂದೆಡೆ ಸುಭದ್ರ ಶಿಕ್ಷಣ ಇದ್ದರೂ ಕೊಠಡಿಗಳೇ ಮಕ್ಕಳಿಗೆ ಜೀವಭಯವನ್ನುಂಟು ಮಾಡುತ್ತಿವೆ. ಹೀಗಾಗಿ ಕೊಠಡಿಗಳು ಆದಷ್ಟು ಶೀಘ್ರದಲ್ಲಿ ದುರಸ್ತಿಗೊಳಿಸಬೇಕು ಎನ್ನುವದು ಸಾರ್ವಜನಿಕರ ಆಗ್ರಹವಾಗಿದೆ.

ಇನ್ನೂ ತಾಲೂಕಿನ 278 ಶಾಲೆಗಳಲ್ಲಿ 100 ಕ್ಕೂ ಹೆಚ್ಚು ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಶೌಚಾಲಯ ಸೌಲಭ್ಯವಿಲ್ಲ.



ಶೌಚಾಲಯಗಳಿವೆ ಆದರೆ ಅದಕ್ಕೆ ಸದಾ ಕೀಲಿ ಹಾಕಿರುತ್ತಾರೆ ಇಲ್ಲವೆ ಸ್ವಚ್ಛತೆ ಇರುವದಿಲ್ಲ ಅಥವಾ ನೀರಿನ ತೊಂದರೆ ಅನುಭವಿಸುತ್ತಿವೆ. ಹೀಗಾಗಿ ಹಳ್ಳಿಗಳಲ್ಲಿ ವಿದ್ಯಾರ್ಥಿನಿಯರಿಗೆ ರಸ್ತೆಯೇ ಗತಿ.

ಇನ್ನೂ ಕೆಲವು ಶಾಲೆಗಳಿಗೆ ಗ್ರಂಥಾಲಯ ಮತ್ತು ಕೆಲವು ಶಾಲೆಗಳಿಗೆ ಆಟದ ಮೈದಾನ ವ್ಯವಸ್ಥೆ ಮಾಡಬೇಕಾಗಿದೆ. ಇನ್ನೂ ಕೆಲವೊಂದು ಶಾಲೆಗಳಲ್ಲಿ ಮಳೆ ಬಂದರೆ ಆಟದ ಮೈದಾನದಲ್ಲಿ ನೀರು ನಿಲ್ಲುತ್ತದೆ.

ತಾಲೂಕಿನಲ್ಲಿ ಕೆಲವೆಡೆ ಹೈಟೆಕ್ ಸರಕಾರಿ ಶಾಲೆಗಳಿವೆ. ಆದರೂ ಶಿಕ್ಷಣ ಇಲಾಖೆ ಅಧಿಕಾರಿಗಳು ಕೋಣೆಗಳನ್ನು ದುರಸ್ತಿ ಮಾಡುವ ಜವಾಬ್ದಾರಿ ವಹಿಸಬೇಕಾಗಿದೆ.

# ಅಪ್ರೆಂಟಿಶಿಪ್‌ಗಾಗಿ ಕ್ಯಾಂಪಸ್ ಸಂದರ್ಶನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಿಎಲ್‌ಡಿಐ ಐಟಿಐ ವಿಜಯಪುರ ಇವರ ಸಹಯೋಗದೊಂದಿಗೆ ಮೇ.17 ರಂದು ಬೆಳಗ್ಗೆ 9 ಗಂಟೆಗೆ ಕಿರ್ಲೋಸ್ಕರ್ ಟೊಯೋಟಾ ಟೆಕ್ಸ್‌ಟೈಲ್ ಮಶಿನರಿ ಪ್ರೈವೆಟ್ ಲಿಮಿಟೆಡ್ ಬೆಂಗಳೂರು ಇವರ ವತಿಯಿಂದ ಐಟಿಐ ಪಾಸಾದ ಹಾಗೂ ಅಂತಿಮ ವರ್ಷದ ಪರೀಕ್ಷೆಗೆ ಹಾಜರಾಗಿರುವ, 23 ವರ್ಷದೊಳಗಿನ ಅಭ್ಯರ್ಥಿಗಳಿಗೆ ಅಪ್ರೆಂಟಿಶಿಪ್‌ಗಾಗಿ ಸಂದರ್ಶನವನ್ನು ಬಿಎಲ್‌ಡಿಈ ಐಟಿಐ/ಪಾಲಿಟೆಕ್ನಿಕ್ ಕಾಲೇಜು ಆವರಣ, ಆಶ್ರಮ ರಸ್ತೆ ವಿಜಯಪುರದಲ್ಲಿ ಆಯೋಜಿಸಲಾಗಿದೆ.

ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಒಂದು ಪ್ರತಿ ಶಾಲಾ ದಾಖಲಾಗಳು, ಎರಡು ಭಾವಚಿತ್ರ ಹಾಗೂ ರೆಸ್ಯೂಮ್‌ನೊಂದಿಗೆ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕಚೇರಿಗೆ ಅಥವಾ ಮೊಬೈಲ್ ಸಂಖೆ 9916853605/9494500079ಕ್ಕೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಚ್ಚದಿರುವ ಕೊಳವೆಬಾವಿಗೆ ಗ್ರಾಮಲೆಕ್ಕಿಗರು–ಪಿಡಿಓಗಳೇ ಹೊಣೆ



**ಉದಯರಶ್ಮಿ ನ್ಯೂಸ್**

ಇಂಡಿ: ತಾಲೂಕಿನಾದ್ಯಂತ ರೈತರು ಹಾಗೂ ಸಾರ್ವಜನಿಕರು ಕೊಳವೆ (ಬೋರ್ ವೆಲ್) ಬಾವಿಗಳು ಮುಚ್ಚದೇ ಇದ್ದರೆ ಗ್ರಾಮ ಲೆಕ್ಕಿಗರು ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಡಂಗರು ಹೊಡೆದು ಅದನ್ನು ಮುಚ್ಚಿಸಬೇಕು. ಒಂದು ವೇಳೆ ಮುಚ್ಚದೆ ಇದ್ದರೆ ಗ್ರಾಮಲೆಕ್ಕಿಗರು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೇರ ಹೊಣೆಗಾರರು ಆಗುತ್ತಾರೆ. ಅಂತವರ ವಿರುದ್ಧ ಶಿಸ್ತು ಕಾನೂನು ಕ್ರಮ ಜರಗಿಸಲಾಗುವುದು ಎಂದು ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.

ಮಂಗಳವಾರ ಪಟ್ಟಣದ ಮಿನಿ ವಿಧಾನಸೌಧದ ತಹಸೀಲ್ದಾರ ಕಚೇರಿಯ ಸಭಾಭವನದಲ್ಲಿ ಪಿಡಿಓ, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ತಾಲೂಕಾ ಮಟ್ಟದ ಎಲ್ಲ ಇಲಾಖೆಯ ಅಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳ ಕುಡಿಯುವ ನೀರಿನ ಕುರಿತು ನಡೆದ ಟಾಸ್ಕ ಫೋರ್ಸ ಸಭೆಯಲ್ಲಿ ಅವರು ಮಾತನಾಡಿದರು.

ನಮ್ಮ ತಾಲೂಕಿನಲ್ಲಿ ಕೊಳವೆ ಬಾವಿಗಳ ಪ್ರಕರಣಗಳು ಮರುಕಳಿಸಬಾರದು. ಬೊರವೆಲ್ ಕೊರಿಯವರು ಕಡ್ಡಾಯವಾಗಿ ಗ್ರಾಪಂ ದಲ್ಲಿ ಎನ್‌ಓಸಿ ತೆಗೆದುಕೊಳ್ಳಬೇಕು. ಒಂದು ವೇಳೆ ತೆಗೆದುಕೊಳ್ಳದಿದ್ದರೆ ಅಂತವರ ವಿರುದ್ಧ ಎಫ್‌ಆಯ್‌ಆರ್ ದಾಖಲಿಸಿ ಎಂದರು.

ನೀರಿನ ಕುರಿತು ತಾಲೂಕಾ ಮಟ್ಟದ ಅಧಿಕಾರಿಗಳು ವಾಚ್ ವಾರ್ಡ ಸರಿಯಾಗಿ ಕೆಲಸ ಮಾಡಬೇಕು ಎಂದರು.

ರೈತರು ನೀರನ್ನು ಕುಡಿಯಲಿಕ್ಕೆ ಮಾತ್ರ ಬಳಸಬೇಕು. ಕೃಷಿಗೆ ಉಪಯೋಗಿಸಬಾರದು ಒಂದು ವೇಳೆ ರೈತರು ಅಕ್ರಮವಾಗಿ ಕಾಲುವೆಗಳು ಅಗೆದರೆ ಅಂಥವರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದರು.

ವೇದಿಕೆಯ ಮೇಲೆ ತಾಪಂ ಇಓ ನೀಲಗಂಗಾ ಉಪಸ್ಥಿತರಿದ್ದರು.

ಹೆಸ್ಕಾ ಎಇಇ ಎಸ್.ಆರ್. ಮೆಂಡೆಗಾರ, ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ, ತೋಟಗಾರಿಕೆ ಸಹಾಯಕ ನಿರ್ದೇಶಕ ಎಚ್.ಎಸ್. ಪಾಟೀಲ, ಪಿಡಬ್ಲೂಡಿ ದಯಾನಂದ ಮಠ, ಸಿದ್ದರಾಮ ಮುಜಗೊಂಡ, ಬಿ.ಎಚ್. ಕನ್ನೂರ, ಪಿಡಿಓ ಗಳಾದ ಉಮೇಶ ಹೂಗಾರ, ಬಸವರಾಜ ಬಬಲಾದ, ಜಬ್ಬಾರ ಹಳ್ಳಿ, ಎಚ್.ಎಸ್. ಗುನ್ನಾಪುರ, ವೀಣಾ ಕೆ ಮತ್ತಿತರಿದ್ದರು.

# ಕಿರಾಣಿ ಅಂಗಡಿ ವ್ಯಾಪಾರಿ ಮಗನ ಸಾಧನೆ



**ಉದಯರಶ್ಮಿ ನ್ಯೂಸ್**

ರೇವತಗಾಂವ: ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಆಕಾಶ ರಾಜೇಂದ್ರ ಬಗಲಿ ಸಾಮಾನ್ಯ ಕಿರಾಣಿ ಅಂಗಡಿ ವ್ಯಾಪಾರಿ ಮಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 581(ಶೇ.92.96%) ಅಂಕಗಳನ್ನು ಪಡೆದು ಉತ್ತೀರ್ಣನಾಗಿದ್ದಾನೆ. ಅಲ್ಲದೇ ಶಾಲೆಗೂ ಪ್ರಥಮ ಸ್ಥಾನ ಪಡೆದಿದ್ದಾನೆ

ಕಠಿಣ ಪರಿಶ್ರಮ ಮತ್ತು ಸಂಕಲ್ಪದಿಂದ ಜೀವನದಲ್ಲಿ ಏನನ್ನೂ ಬೇಕಾದರೂ ಸಾಧಿಸಬಹುದು. ಆಗದಾರಿ ಎಷ್ಟೇ ಕಷ್ಟವಾದರೂ ಸರಿ ಗುರಿ ಮುಟ್ಟಲು ಸಾಧ್ಯ ಎಂದು ಈ ಆಕಾಶ ತೋರಿಸಿಕೊಟ್ಟಿದ್ದಾರೆ. 15 ವರ್ಷಗಳಿಂದ ಇಲ್ಲಿಯವರೆಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಶಾಲಾ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಇತ್ತು. ಈ ಬಾರಿ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆಯುವ ಮೂಲಕ ನಾವು ಏನೂ ಕಡಿಮೆ ಇಲ್ಲ ಎಂಬುದನ್ನು ಈ ಬಾಲಕ ತೋರಿಸಿಕೊಟ್ಟಿದ್ದಾನೆ.

ತಂದೆ ಗ್ರಾಮದಲ್ಲಿ ಸುಮಾರು 45 ವರ್ಷಗಳಿಂದ ಕಿರಾಣಿ ಅಂಗಡಿ ವ್ಯಾಪಾರಿ ವೃತ್ತಿಯನ್ನು ಮಾಡುತ್ತ ತನ್ನ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಬೇಕೆಂದು ಮಕ್ಕಳಿಗಾಗಿ ಆಸ್ತಿಯನ್ನು ಮಾಡುವುದು ಬೇಡ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವ ತತ್ವವನ್ನು ಇಟ್ಟುಕೊಂಡು ಅವನು ತುಂಬಾ ಕಷ್ಟಪಟ್ಟಿದ್ದಾನೆ. ಶ್ರಮಕ್ಕೆ ತಕ್ಕ ಫಲ ಸಿಕ್ಕಿದೆ ಎಂದು ಅವರ ರಾಜೇಂದ್ರರವರು ಹೇಳಿದರು.

ವಿದ್ಯಾರ್ಥಿ ಆಕಾಶ ಬಗಲಿ ಮಾತನಾಡುತ್ತ. ಪಾಲಕರ ಪರಿಶ್ರಮದ ಫಲವಾಗಿ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ನನ್ನ ಪೋಷಕರು ಮತ್ತು ಶಿಕ್ಷಕರು ನನ್ನನ್ನು ಚೆನ್ನಾಗಿ ತಯಾರು ಮಾಡಲು ಪ್ರೋತ್ಸಾಹಿಸಿದರು. ಕಠಿಣ ಪರಿಶ್ರಮದ ಜೊತೆಗೆ ಆಕಾಶ ತನ್ನ ಶೈಕ್ಷಣಿಕ ಯಶಸ್ಸನ್ನು ತನ್ನ ಪೋಷಕರು ಮತ್ತು ಶಿಕ್ಷಕರಿಗೆ ಕಾರಣವೆಂದು ಹೇಳಿದರು.

ವಿದ್ಯಾರ್ಥಿಯ ಈ ಪರಿಶ್ರಮಕ್ಕೆ ಶಾಲೆಯ ಮುಖ್ಯ ಗುರುಗಳಾದ ಎಂ.ಎಸ್.ಪಾಟೀಲ ಹಾಗೂ ಶಿಕ್ಷಕರುಗಳು ಹಾಗೂ ಮಲ್ಲು ಮಾನೆ, ಎಸ್.ಎಂ.ಮಾಳಿ, ಪಿ.ಸಿ.ಮಾಳಿ ಸೇರಿದಂತೆ ಗ್ರಾಮಸ್ಥರು ಹರ್ಷವ್ಯಕ್ತಪಡಿಸಿದ್ದಾರೆ.

# ಪೀಸ್ ಇಂಟರ್‌ನ್ಯಾಶನಲ್ ಪ್ರೌಢಶಾಲೆಗೆ ಶೇ.100 ಫಲಿತಾಂಶ



**ಉದಯರಶ್ಮಿ ನ್ಯೂಸ್**

ಕಲಕೇರಿ: ಗ್ರಾಮದ ಪೀಸ್ ಇಂಟರ್‌ನ್ಯಾಶನಲ್ ಆಂಗ್ಲ ಮಾಧ್ಯಮ ಪ್ರೌಡಶಾಲೆಯ ವಿಧ್ಯಾರ್ಥಿಗಳು 2023–24 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ಪರೀಕ್ಷೆಗೆ ಕುಳಿತ ಎಲ್ಲ ವಿದ್ಯಾರ್ಥಿಗಳು ಪಾಸಾಗುವ ಮೂಲಕ ಶಾಲೆಯ ಒಟ್ಟು ಫಲಿತಾಂಶ ಶೇ.100 ರಷ್ಟಾಗಿದೆ.

ಮಹ್ಮದ್ ತನವೀರ ತಾಳಿಕೋಟಿ – 590 – 94.4% ಪಡೆದು ಪ್ರಥಮ ಸ್ಥಾನ, ಸಾಹೇಬಗೌಡ ಕರಿಗೌಡರ – 542 – 86.72%

ದ್ವಿತೀಯ ಸ್ಥಾನ, ಅಬ್ದುಲ್‌ರಹಮಾನ ಅಸ್ಕಿ– 514 – 82.24% ತೃತೀಯ ಸ್ಥಾನ, ಮಕ್ಕಾಬಿ ನದಾಫ – 509 – 81.44% ನಾಲ್ಕನೆ ಸ್ಥಾನ ಪಡೆದು ಶಾಲೆಗೆ ಕೀರ್ತಿಯನ್ನು ತಂದಿದ್ದು, ಮಕ್ಕಳ ಸಾಧನೆಗೆ ಮುಖ್ಯಗುರುಗಳು, ಸಿಬ್ಬಂದಿ ವರ್ಗ ಹಾಗೂ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

# ಗುರುವಿಲ್ಲದೆ ಜ್ಞಾನದ ಸಾಧನೆ ಸಾಧ್ಯವಿಲ್ಲ



**ಉದಯರಶ್ಮಿ ನ್ಯೂಸ್**

ಹೊನವಾಡ: ಗುರುವಿಲ್ಲದೆ, ಜೀವನದ ಅರ್ಥವಾಗಲಿ ಅಥವಾ ಜ್ಞಾನದ ಸಾಧನೆಯಾಗಲಿ ಸಾಧ್ಯವಿಲ್ಲ ಎಂದು ಚಿಕ್ಕರೂಗಿಯ ಈರಣ್ಣ ಶಾಸ್ತ್ರಿಗಳು ಹೇಳಿದರು.

ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದ ಕಲ್ಮೇಶ್ವರ ದೇವಸ್ಥಾನದಲ್ಲಿ ಬಸಣ್ಣ ಮಹಾರಾಜರು ಹಂಜಿಯವರ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ಮೊದಲ ಗುರು ತಾಯಿ ನಮಗೆ ಜೀವ ನೀಡಿ ಲೌಕಿಕ ಮೌಲ್ಯಗಳನ್ನು ಪರಿಚಯಿಸಿದಂತೆ ಒಬ್ಬ ಗುರು ಮಾತ್ರ ಜ್ಞಾನ ಮತ್ತು ಭಗವಂತನ ಸಾಧನೆಯ ಮಾರ್ಗವನ್ನು ತೋರಿಸಬಲ್ಲ ಎಂದು ಎಸ್ ಏನ್ ಮಂಗೊಂಡ ಹೇಳಿದರು.

ಬ್ರಹ್ಮಸ್ವರೂಪಿ ನಿರಾಕಾರ ಕಣ್ಣಿಗೆ ಕಾಣುವುದಿಲ್ಲ ನಿಜವಾದ ವಸ್ತುವನ್ನು ತೋರಿಸುವವನೆ ನಿಜವಾದ ಗುರು ಅಖಂಡ ಧ್ಯಾನದಿಂದಲೇ ನಾವು ಆ ದೇವರನ್ನು ಕಾಣಬಹುದು ಎಂದು ವಿಲಾಸರಾವ ಮಹಾರಾಜರು ಹೇಳಿದರು.

ಬಿ ಡಿ ತೊದಲಬಾಗಿ ದಾನಯ್ಯ ಸತ್ತಿಗೇರಿ ರಾಮು ಚಪ್ಪರ ಎಸ್ ಬಿ ಕಡಬಿ ಬಿ ಎಂ ದೇವನಾಯಕ ಬಸವರಾಜ್ ಬರಾಡಿ ಕಲ್ಲಪ್ಪ ಹಂಜಿ ಮಹಾದೇವ ಹಂಜಿ ಮತ್ತಿತರರು ಇದ್ದರು.

# ಬೆಳೆ ಪರಿಹಾರ: ಸಹಾಯವಾಣಿ ಆರಂಭ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ರೈತರಿಗೆ ಸರಕಾರದಿಂದ ಬಿಡುಗಡೆ ಮಾಡುತ್ತಿರುವ ಬೆಳೆ ಪರಿಹಾರ ಬರದೇ ಇದ್ದಲ್ಲಿ ವಿಚಾರಣೆಗಾಗಿ ಪಟ್ಟಣದ ತಹಶೀಲ್ದಾರ ಕಚೇರಿಯಲ್ಲಿ ಸಹಾಯವಾಣಿಯನ್ನು ಆರಂಭಿಸಲಾಗಿದ್ದು, ಇಲ್ಲಿ ಕಂದಾಯ ಇಲಾಖೆಯ ಮತ್ತು ಕೃಷಿ ಇಲಾಖೆಯ ತಲಾ ಒಬ್ಬರು ಸಿಬ್ಬಂದಿಗಳು ಹಾಜರಿರುತ್ತಾರೆ. ಬೆಳೆ ಪರಿಹಾರ ಬರದ ರೈತರು ಸಂಪರ್ಕಿಸಬಹುದು ಅಥವಾ 08356–20227 ಈ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಹಶೀಲ್ದಾರ ಬಸವರಾಜ ನಾಗರಾಳ ತಿಳಿಸಿದ್ದಾರೆ.



## PUBLIC NOTICE

This is to inform to the general public that one Smt. Suvarna W/o. Basanagouda Policepatil Age: Major Occ: Agriculture, C/o. Basanagouda Policepatil 139/1 near Panchayat Office Tilagul Vtc. Tilgul Po, Tilgul Sub District Sindhagi Dist: Vijayapur State : Karnataka . proposes to mortgage his property mentioned in the schedule in favour of my client HDFC Bank Ltd., Haveri . Smt. Suvarna Basanagouda Policepatil who has lost the Registered Deeds –

1) SIN-1-10519-2019-20 CD No: SIND439 Date: 21/10/2019

The khatedar by name executed by Mallikarjun S/o. Shivappa Muli @ Allapur he made a gift Deed in favour of his own son Satish S/o. Mallikarjun Allapur in respect of property bearing no. RS No. 794/3 measuring 04 acre 09 guntas

2) SIN-1-04695-2014-15 CD No. SIND136 Date : 11/08/2014

The khatedar by name by Mallikarjun S/o. Shivappa Muli @ Allapur to Mahammad S/o. Nabilal Bagavan in respect of property bearing no. 794/3 measuring 2 acre

3) SIN-1-11293-2016-17 CD No. SIND178 Date: 23/01/2017

Consent Deed in respect of property no 794/3 measuring 12 acres 20 guntas

If any person or persons having any claim or charge or right over the said property described below may file their objections or represent the undersigned counsel with necessary documents in support of their claim within 07 days from the date of publication of this notice failing which my client HDFC Bank Ltd., Haveri will proceed to create charge over the said property.

Office Address
SMT. GEETA C. KATTIMANI
ADVOCATE
C/o. P.H. Doddamani
H.No. 30, 'A' Block , 1st Main,
4th Cross Daneshwari Nagar,
Haveri - 581 110

GEETA .C. KATTIMANI
ADVOCATE, Haveri

Date: 03/05/2024

## ಸಾರ್ವಜನಿಕ ನೋಟೀಸು

ನನ್ನ ಪಕ್ಷಗಾರರಾದ ಎಚ್.ಡಿ.ಎಫ್.ಸಿ.ಬ್ಯಾಂಕ ಲಿ. ಹಾವೇರಿ ಇವರಲ್ಲಿ ಶ್ರೀಮತಿ ಸುವರ್ಣ ಕೋಂ. ಬಸನಗೌಡ ಪೋಲಿಸಪಾಟೀಲ ಸಾ: ಕೆ/ಆಫ್. ಬಸನಗೌಡ ಪೋಲಿಸಪಾಟೀಲ 1391. ಪಂಚಾಯತ ಆಫೀಸ ಹತ್ತಿರ ತಿಳಗೂಳ ವಿಟಿಸಿ, ತಿಳಗೂಳ ಪೋ, ತಿಳಗೂಳ ಸಬ್‌ಡಿಸ್ಟ್ರಿಕ್ಟ ಸಿಂಧಗಿ ಜಿ: ವಿಜಯಪುರ ಇವರು ತಮ್ಮ ಆಸ್ತಿ RS No. 794/3 ಗೆ ಸಂಬಂಧಪಟ್ಟ ಖರೀದಿ ಕರಾರು ಪತ್ರ, ಭಕ್ಷಿಸ್ ಪತ್ರ, ಒಪ್ಪಿಗೆ ಪತ್ರಗಳಾದ

1. SIN-1-10519-2019-20 CD No: SIND439 Date: 21/10/2019
   ಸರ್ವೆ ನಂ.794/3 ಕ್ಷೇತ್ರ 4 ಎಕರೆ 9 ಗುಂಟೆ
2. SIN-1-04695-2014-15 CD No. SIND136 Date: 11/08/2014
   ಸರ್ವೆ ನಂ. 794/3 ಕ್ಷೇತ್ರ 2 ಎಕರೆ
3. SIN-1-11293-2016-17 CD No. SIND178 Date: 23/01/2017
   ಸರ್ವೆ ನಂ. 794/3 ಕ್ಷೇತ್ರ 12 ಎಕರೆ 20 ಗುಂಟೆ

ಇವುಗಳನ್ನು ಕಳೆದುಕೊಂಡಿದ್ದು ಇರುತ್ತದೆ. ಕಾರಣ, ಸದರಿ ಖರೀದಿ ಕರಾರು ಪತ್ರ, ಭಕ್ಷಿಸ್ ಪತ್ರ, ಒಪ್ಪಿಗೆ ಪತ್ರಗಳು ಯಾರಿಗಾದರೂ ಸಿಕ್ಕಿದ್ದರೆ ಮತ್ತು ಈ ಆಸ್ತಿಗೆ ಸಂಬಂಧ ಪಟ್ಟಂತೆ ಸುವರ್ಣ ಇವರು ಪ್ಲೆಡ್ಜ್ ಇಡುವವರಿದ್ದು ತಮ್ಮ ಯಾವುದೇ ತಕರಾರು ಇದ್ದಲ್ಲಿ ಈ ಸಾರ್ವಜನಿಕ ನೋಟೀಸು ಪ್ರಕಟಣೆಗೊಂಡ 7 ದಿವಸಗಳಲ್ಲಿ ಈ ಕೆಳಗೆ ಕಂಡ ವಿಳಾಸಕ್ಕೆ ಬಂದು ತಕರಾರು ಸಲ್ಲಿಸಬೇಕು. ಒಂದು ವೇಳೆ ಸದರ ವೇಳೆಯಲ್ಲಿ ಯಾವುದೇ ತಕರಾರು ಬಾರದೇ ಇದ್ದರೆ ನಮ್ಮ ಪಕ್ಷಗಾರರು ಸದರಿ ಎಚ್.ಡಿ.ಎಫ್.ಸಿ. ಬ್ಯಾಂಕ ಹಾವೇರಿ ಇವರು ಶ್ರೀಮತಿ ಸುವರ್ಣ ಕೋಂ, ಬಸನಗೌಡ ಪೋಲಿಸಪಾಟೀಲ ಅವರ ಆಸ್ತಿಯ ಮೇಲೆ ಪ್ಲೆಡ್ಜ್ ಮಾಡಲು ಯಾವುದೇ ತಕರಾರು ಇರುವುದಿಲ್ಲ ಅಂತಾ ಪರಿಗಣಿಸಲಾಗುತ್ತದೆ.

ಶ್ರೀಮತಿ ಗೀತಾ ಸಿ. ಕಟ್ಟಿಮನಿ
ವಕೀಲರು
ಕೆ. ಆಫ್, ಪಿ.ಎಚ್.ದೊಡ್ಡಮನಿ
ಮನೆ ನಂ. 30 'ಎ' ಬ್ಲಾಕ್, 1ನೇ ಮೇನ್
4ನೇ ಕ್ರಾಸ್, ದಾನೇಶ್ವರಿ ನಗರ ಹಾವೇರಿ

ಶ್ರೀಮತಿ ಗೀತಾ ಸಿ. ಕಟ್ಟಿಮನಿ
ವಕೀಲರು ಹಾವೇರಿ

03/05/2023




ಉದಯರಶ್ಮಿ
ಪ್ರತಿ ಮನೆ-ಮನದ ಸಂಗಾತಿ

# ಸಾರ್ವಜನಿಕ ಆಸ್ಪತ್ರೆಗೆ ಎಸಿ ಗದ್ಯಾಳ ಧಿಡೀರ್ ಭೇಟಿ



ಇಂಡಿ: ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಎಸಿ ಗದ್ಯಾಳ್ ಸೋಮವಾರ ಧಿಡೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿ ಸಮಗ್ರ ಮಾಹಿತಿ ಪಡೆದುಕೊಂಡರು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ॥ ಈರಣ್ಣ ಧಾರವಾಡಕರ್ ಕಂದಾಯ ಉಪ ವಿಭಾಗಾಧಿಕಾರಿಗಳಿಗೆ ಅಲ್ಲಿನ ವ್ಯವಸ್ಥೆ ಕುರಿತು ವಿವರಿಸಿದರು.

ಕಳೆದ 15 ವರ್ಷಗಳಿಂದ ಆಸ್ಪತ್ರೆಯಲ್ಲಿ ಸಿಜೇರಿಯನ್ ವ್ಯವಸ್ಥೆ ಇರಲಿಲ್ಲ. ಈಗ ವಾರದಲ್ಲಿ ಎರಡು ದಿನ ಮಂಗಳವಾರ ಮತ್ತು ಶುಕ್ರವಾರ ಸಿಜೇರಿಯನ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ಓಪಿಡಿ ವಿಭಾಗದಲ್ಲಿ ಮೊದಲಿನಂತೆ ಹಾಳೆಯ ಮೇಲೆ ಚೀಟಿ ಬರೆಯುತ್ತಿಲ್ಲ ಬದಲಾಗಿ ಡಿಜಟಲೀಕರಣ ಮಾಡಲಾಗಿದ್ದು ರೋಗಿಯ ಆಧಾರ ಕಾರ್ಡ ನಂಬರ್ ನೀಡಿದರೆ ಕೂಡಲೆ ಓಪಿಡಿ ಚೀಟಿಯ ಪ್ರಿಂಟ್ ಬರುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ತುರ್ತು ಚಿಕಿತ್ಸಾ ವಿಭಾಗದಲ್ಲಿಯೂ ಸಹ ಉನ್ನತ ಮಟ್ಟದ ಮಶೀನಗಗಳನ್ನು ಸ್ಥಾಪಿಸಲಾಗಿದೆ. ರಕ್ತ ಶೇಖರಣಾ ಘಟಕ ಪ್ರಾರಂಭಿಸಲಾಗಿದ್ದು, ಖಾಸಗಿ ವೈದ್ಯರಿಗೂ ಸಹ ರಕ್ತ ನೀಡಲು ಮುಂದಾಗಲೂ ಸೂಚಿಸಿದರು.

ಕೆಂದ್ರೀಯ ಪ್ರಯೋಗಾಲಯಕ್ಕೆ ಭೇಟಿ ನೀಡಿ ಅಲ್ಲಿನ ಉನ್ನತ ಮಟ್ಟದ ಟೆಸ್ಟ ಮಾಡುವುದನ್ನು ವೀಕ್ಷಿಸಿ ಅಲ್ಲಿನ ಸಿಬ್ಬಂದಿ ಹಾಗೂ ಮುಖ್ಯ ವೈದ್ಯಾಧಿಕಾರಿಗಳಿಗೆ ಪ್ರಶಂಸಿಸಿದರು.

ಈ ವಾರದಲ್ಲಿ 57 ಟೆಸ್ಟಗಳನ್ನು ಮಾಡಲು ಪ್ರಾರಂಭ ಮಾಡಲಾಗುತ್ತದೆ ಎಂದು ವೈದ್ಯರು ತಿಳಿಲಸಿದರು.

ಕ್ಷಯರೋಗ ವಿಭಾಗಕ್ಕೆ ಭೇಟಿ ನೀಡಿದ ಕಂದಾಯ ಉಪವಿಭಾಗಾಧಿಕಾರಿಗಳು ಉನ್ನತ ತಾಂತ್ರಿಕ ಸಿ.ಬಿ.ಎನ್.ಎ.ಎ.ಟಿ ಮಶೀನ್ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ವೈದ್ಯರ ಕೊರತೆ ಎದ್ದು ಕಾಣುತ್ತಿದ್ದು ನಿಯೋಜನೆ ಮೇಲಿರುವ ವೈದ್ಯರನ್ನು ಕರೆ ತರಲು ಡಿಹೆಚ್ ಓ ಅವರಿಗೆ ಪತ್ರ ಬರೆಯಲುಸೂಚಿಸಿದರು.

ಎನ್.ಆರ್.ಸಿ ಕೇಂದ್ರದ ಕಟ್ಟಡ ಪೂರ್ಣಗೊಂಡಿದ್ದು ಇದುವರೆಗೂ ನಮಗೆ ಹಸ್ತಾಂತರವಾಗಿಲ್ಲ ಎಂದು ಮುಖ್ಯ ವೈದ್ಯಾಧಿಕಾರಿಗಳು ಕಂದಾಯ ಉಪವಿಭಾಗಾಧಿಕಾ–ರಿಗಳಿಗೆ ತಿಳಿಸಿದಾಗ ಕೇಂದ್ರಕ್ಕೆ ಭೇಟಿ ನೀಡಿದ ಅಬೀದ್ ಗದ್ಯಾಳ ಅಲ್ಲಿನ ಕಟ್ಟಡ ಬಿರುಕು ಬಿಟ್ಟಿದ್ದನ್ನು ಕಂಡು ಅಸಮಾಧನಾಗೊಂಡು ಲ್ಯಾಂಡ್ ಆರ್ಮಿ ಇಲಾಖೆಯ ಅಧಿಕಾ–ರಿಗಳಿಗೆ ಕರೆ ಮಾಡಿ ಕಟ್ಟಡ ಬಿರುಕು ಬಿಟ್ಟಿದ್ದಲ್ಲದೆ ಇನ್ನಷ್ಟು ಕೆಲಸಗಳು ಬಾಕಿ ಉಳಿದುಕೊಂಡಿವೆ. ಅವೆಲ್ಲವನ್ನೂ ಕೂಡಲೆ ಪೂರ್ಣಗೊಳಿಸಿ, ಜೊತೆಗೆ ಮೂಲ ಸೌಲಭ್ಯ ಕಲ್ಪಿಸಿ ಕೂಡಲೆ ಮುಖ್ಯ ವೈದ್ಯಾಧಿಕಾರಿಗಳಿಗೆ ಕಟ್ಟಡ ಹಸ್ತಾಂತರಿಸಲು ಸೂಚಿಸಿದರು.

ವಿಶ್ವ ದಾದಿಯರ ದಿನದ ಪ್ರಯುಕ್ತ ಎಲ್ಲ ದಾದಿಯರಿಗೆ ಕಂದಾಯ ಉಪವಿಭಾಗಾಧಿಕಾ–ರಿಗಳು ಶುಭಾಷಯ ತಿಳಿಸಿ, ನಿಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ಯಾವುದೇ ಫಲಾಪೇಕ್ಷೆ ಇಲ್ಲದೆ ಮಾಡಿ ಎಂದು ತಿಳಿಸಿದರು.

ಡಾ॥ ರವಿ ಭತಗುಣಕಿ, ಡಾ॥ ಅಮಿತ ಕೋಳೆಕರ್, ಡಾ॥ ವಿಪುಲ್ ಕೋಳೆಕರ್ ಸೇರಿದಂತೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಎಸ್ಸೆಸ್ಸೆಲ್ಸಿಯಲ್ಲಿ ತ್ರಿವಳಿ ಸಹೋದರಿಯರ ಸಾಧನೆ

ಉದಯರಶ್ಮಿ ನ್ಯೂಸ್



ತಿಕೋಟಾ: ವಿಜಯಪುರ ನಗರದ ಸೆಂಟ್ ಜೋಸೆಫ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ತಿಕೋಟಾ ಪಟ್ಟಣದ ವೈದ್ಯ ದಂಪತಿ ಡಾ. ಗುರುರಾಜ ನಾಗಠಾಣ ಹಾಗೂ ಡಾ.ಜಯಶ್ರೀ ನಾಗಠಾಣ ಅವರ ತ್ರಿವಳಿ ಅವಳಿ ಪುತ್ರಿಯರು ಈ ಬಾರಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಉತ್ತಮ ಅಂಕ ಪಡೆದು ಸಾಧನೆ ಮಾಡಿದ್ದಾರೆ.

ತ್ರಿವಳಿ ಅವಳಿ ಸಹೋದರಿಯರಾದ ಅಪೂರ್ವ ಶೇ. 95.36, ಅಮೂಲ್ಯ ಶೇ. 94.24 ಆಕಾಂಕ್ಷ ಶೇ. 85.28 ಮೂವರೂ ಉತ್ತಮ ಅಂಕ ಪಡೆದು ಗಮನ ಸೆಳೆದಿದ್ದಾರೆ. ಈ ತ್ರಿವಳಿ ಸಹೋದರಿಯರ ಸಾಧನೆಗೆ ಗ್ರಾಮಸ್ಥರು ಹಾಗೂ ವೈದ್ಯ ದಂಪತಿಗಳು ಹರ್ಷವ್ಯಕ್ತಪಡಿಸಿದ್ದಾರೆ.

# ಸರ್ಕಾರಿ ಕೆಲಸ ಮತ್ತು ಅಧಿಕಾರಿಗಳು

ಬಹಳಷ್ಟು ಸರ್ಕಾರಿ ಅಧಿಕಾರಿಗಳ ಒಂದು ಸಾಮಾನ್ಯ ಗುಣ ಎಂದರೆ, ( ಕೇಂದ್ರ ಮತ್ತು ರಾಜ್ಯ ಸೇರಿ )

ಐಎಎಸ್ ಅಧಿಕಾರಿಗಳಿಂದ ಡಾಕ್ಟರ್, ಇಂಜಿನಿಯರ್ ಸೇರಿದಂತೆ ಬಹುತೇಕ ಎಲ್ಲಾ ವಿಭಾಗದವರು ಕೆಲಸಕ್ಕೆ ಸೇರುವಾಗ ಅತ್ಯಂತ ಶ್ರದ್ಧೆಯಿಂದ ಮತ್ತು ಕಷ್ಟಪಟ್ಟು ಓದುತ್ತಾರೆ.

ಕೆಲಸ ಸಿಕ್ಕ ನಂತರ ಅಲ್ಲಿಗೆ ಅವರ ಓದು ಪರಿಶ್ರಮ ಮತ್ತು ಬುದ್ದಿಯ




ಉದಯರಶ್ಮಿ ದಿನಪತ್ರಿಕೆ

ಬೆಳವಣಿಗೆ ಹೆಚ್ಚು ಕಡಿಮೆ ನಿಂತು ಹೋಗುತ್ತದೆ..

ಕೆಲಸ ಸೇರಿದ ನಂತರ ಒಮ್ಮೆ ತಮ್ಮ ಆಫೀಸಿನ ಕೆಲಸ ಪ್ರಾರಂಭ ಮಾಡುವ ಅವರು ಖಚಿತ ಸಂಬಳದ ಭದ್ರತೆಯೊಂದಿಗೆ ಫೈಲುಗಳಲ್ಲಿ ಮುಳುಗಿ ಹೋಗುತ್ತಾರೆ. ಯಾವುದೇ ಹೊಸತನಕ್ಕೂ ತಮ್ಮನ್ನು ತೆರೆದು ಕೊಳ್ಳುವುದಿಲ್ಲ ಮತ್ತು ನಮ್ಮ ಸರ್ಕಾರಿ ವ್ಯವಸ್ಥೆ ಅದಕ್ಕೆ ಪ್ರೋತ್ಸಾಹವೂ ಕೊಡುವುದಿಲ್ಲ..

ಸಾಕಷ್ಟು ಅಧಿಕಾರಿಗಳು ತಮ್ಮ ಯೌವನದ ದಿನಗಳಲ್ಲಿ ಸರ್ಕಾರಿ ಕೆಲಸ ಪ್ರಾರಂಭಿಸಿದರೆ ಮತ್ತೆ ಬದುಕಿನ ಬಗ್ಗೆ ಹಿಂತಿರುಗಿ ನೋಡುವುದು ನಿವೃತ್ತಿಯ ಸಮಯದಲ್ಲಿ..

ಸಾಮಾನ್ಯವಾಗಿ ನಮ್ಮ ವ್ಯವಸ್ಥೆಯಲ್ಲಿ ಸರ್ಕಾರದ ಕೆಲಸ ಪಡೆಯುವುದೇ ಜೀವನದ ಸಾರ್ಥಕತೆ ಎಂದು ಭಾವಿಸಲಾಗುತ್ತದೆ. ಕೆಲಸ ದೊರೆತ ನಂತರ ಅವರ ಮಾರುಕಟ್ಟೆ ಮೌಲ್ಯ ವೃದ್ಧಿಸುತ್ತದೆ. ಆಗ ಆದಷ್ಟು ಬೇಗ ಮದುವೆ ಮಾಡಲಾಗುತ್ತದೆ. ಅಲ್ಲಿಂದ ಅವರ ಯೋಚನೆ

ಹೆಂಡತಿ/ಗಂಡ, ಮಕ್ಕಳು, ಅವರ ವಿದ್ಯಾಭ್ಯಾಸ, ಮದುವೆ, ಸ್ವಂತ ಮನೆ ಇತ್ಯಾದಿಗಳ ಸುತ್ತಲೇ ತಮ್ಮೆಲ್ಲಾ ಯೋಜನೆ ಮತ್ತು ಕಾರ್ಯತಂತ್ರ ರೂಪಿಸುತ್ತಾರೆ..

ಹೇಗಿದ್ದರೂ ಸಂಬಳ ತಿಂಗಳಿಗೆ ಸರಿಯಾಗಿ ಬರುತ್ತದೆ. ದಿನ ಕಳೆದಂತೆ ಆಫೀಸಿನ ಕೆಲಸಗಳೂ ಸುಲಭವಾಗಿ ಕಾಟಾಚಾರಾದ ಟೈಂಪಾಸ್ ಗಾಗಿ ದಿನ ದೂಡುತ್ತಾರೆ ಮತ್ತು ಸಾರ್ವಜನಿಕ ಸೇವೆ ಎಂಬುದು ಮರೆತೇ ಹೋಗುತ್ತದೆ. ಇನ್ನು ಕ್ರಿಯಾತ್ಮಕ ಚಟುವಟಿಕೆಗಳ ಬಗ್ಗೆ ಯೋಚಿಸುವ ಗೋಜಿಗೇ ಹೋಗುವುದಿಲ್ಲ. ಹೊಸ ಹೊಸ ವಿಷಯಗಳನ್ನು ಕಲಿಯುವ ಆಸಕ್ತಿಯೂ ಇರುವುದಿಲ್ಲ.

ಸಾಧನೆಯ ಕನಸೂ ಕಾಣುವುದಿಲ್ಲ..

30 ವರ್ಷಗಳಷ್ಟು ದೀರ್ಘಕಾಲ ಆರ್ಥಿಕ ಭದ್ರತೆ ಅವರನ್ನು ಸೋಮಾ–ರಿಗಳಾಗಿ ಮಾಡುತ್ತದೆ..

ಎಲ್ಲೋ ಬೆರಳೆಣಿಕೆಯಷ್ಟು ಜನ ಮಾತ್ರ ಈ ಏಕತಾನತೆಯನ್ನು ಮೀರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಾರೆ. ಅದು ತೀರಾ ಅಪರೂಪ..

ಈಗ ಅರ್ಥವಾಗಿರುವ ವಿಷಯವೆಂದರೆ ಈ ಕಾರಣ–ಕ್ಕಾಗಿಯೇ ನಮ್ಮ ಆಡಳಿತಾತ್ಮಕ ವ್ಯವಸ್ಥೆ ಜಡ್ಡುಗಟ್ಟಿ ಹೋಗಿ ಸಂವೇದನೆಯನ್ನೇ ಕಳೆದುಕೊಂಡಿದೆ.

5 ವರ್ಷದ ಅವಧಿಯ ರಾಜ–



ಕಾರಣಿಗಳ ಕ್ರಿಯಾತ್ಮಕ – ದುರಾತ್ಮಕ ಭ್ರಷ್ಟತೆಗೆ ಇದು ಅತ್ಯಂತ ಪೂರಕ ವಾತಾವರಣ ಕಲ್ಪಿಸಿದೆ..

ಹೆಸರಿಗೆ ಮಾತ್ರ ಕೃಷಿ, ನೀರಾವರಿ, ಗೃಹ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಹಣಕಾಸು, ಮಹಿಳೆಯರು, ಮಕ್ಕಳು, ಕಂದಾಯ ಹೀಗೆ ಎಲ್ಲಾ ಕ್ಷೇತ್ರಗಳಿಗೂ ಇಲಾಖೆಗಳು ಇವೆ. ಆದರೆ ಕೆಲಸ ಮಾತ್ರ ಯಥಾಸ್ಥಿತಿ ಕಾಪಾಡುವುದು ಅಥವಾ ಅದನ್ನು ಇನ್ನಷ್ಟು ಅಧೋಗತಿಗೆ ಒಯ್ಯುವುದು..

ಅವರು ಆಧುನಿಕತೆಗೆ, ಹೊಸತನಕ್ಕೆ, ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳಲು ತುಂಬಾ ಉದಾಸೀನ ಮನೋಭಾವ ಹೊಂದಿರುತ್ತಾರೆ. ಗಣಿಜಚಿಣಜ ಆಗಲು ಪ್ರಯತ್ನಿಸುವುದೇ ಇಲ್ಲ. ಅದಕ್ಕಾಗಿ ಶ್ರಮ ಪಡುವುದು ಇಲ್ಲ. ಕಾರಣ ಆರ್ಥಿಕ ಭದ್ರತೆ..

ನಿಜಕ್ಕೂ ದೇಶದ ಸರ್ವತೋಮುಖ ಅಭಿವೃದ್ಧಿಗೆ ದೇಶದ ಆಡಳಿತಶಾಹಿ ವ್ಯವಸ್ಥೆ ಅತ್ಯಂತ ಪ್ರಾಮಾಣಿಕ ಮತ್ತು ಕ್ರಿಯಾತ್ಮಕವಾಗಿರಬೇಕು. ಇಲ್ಲದಿದ್ದರೆ ಯಾವ ಯೋಜನೆಗಳು ಎಷ್ಟೇ ಉತ್ತಮವಾಗಿದ್ದರೂ ಪ್ರಯೋಜನವಾಗುವುದಿಲ್ಲ..


ಆದ್ದರಿಂದ ಈ ವಿಷಯದಲ್ಲಿಯೇ ಅತ್ಯಂತ ಜರೂರಾಗಿ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮತ್ತು ಕ್ರಿಯಾತ್ಮಕವಾಗಿ ಪುನರ್ ರೂಪಿಸಿ ಅಧಿಕಾರಿಗಳನ್ನು ಹೆಚ್ಚು ಉತ್ತರದಾಯಿತ್ವಕ್ಕೆ ಒಳಪಡಿಸಬೇಕಿದೆ.

ಸರ್ಕಾರಿ ಕೆಲಸ ಅತ್ಯಂತ ಜವಾಬ್ದಾ–ರಿಯುತ ಕೆಲಸವೇ ಹೊರತು ಓತ್ಲಾ ಹೊಡೆಯುವ ಆರಾಮ ಕೆಲಸ ಅಲ್ಲ ಎಂದು ಪ್ರತಿ ಉದ್ಯೋಗಿಗೂ ಮನನ ಮಾಡಿಸಬೇಕಿದೆ..

ವೇತನ/ಹಣಕಾಸು ಆಯೋಗಗಳ ಶಿಫಾರಸ್ಸುಗಳಿಂದಾಗಿ ಅವರ ಸಂಬಳ ಮತ್ತು ಭತ್ಯೆಗಳು ಹೆಚ್ಚಾಗುತ್ತಿದೆ. ಅದಕ್ಕಾಗಿ ಸಂತೋಷಪಡುತ್ತಾ..

ಆದರೆ ಸರ್ಕಾರಿ ವ್ಯವಸ್ಥೆಯೊಂದಿಗಿನ ನನ್ನ ಅನುಭವದಲ್ಲಿ ಹೇಳುವುದಾದರೆ..

ಶೇಕಡ 90% ಎಲ್ಲಾ ದರ್ಜೆಯ ಸರ್ಕಾರಿ ಅಧಿಕಾರಿಗಳಿಗೂ ಕೊಡುವ ಸಂಬಳಕ್ಕೆ ಅವರಿಂದ ನ್ಯಾಯ ಸಿಗುತ್ತಿಲ್ಲ. ಅಷ್ಟೇ ಅಲ್ಲ ಶೇಕಡ 50% ಜನರಿಂದ ಅನ್ಯಾಯವೂ ಆಗುತ್ತಿದೆ. ನಿಜವಾದ






ಭ್ರಷ್ಟಾಚಾರ ಎಂಬುದು ಸಾಮಾನ್ಯ ಜನರಿಗೆ ಅರಿವಾಗುವುದೇ ಸರ್ಕಾರಿ ಅಧಿಕಾ–ರಿಗಳಿಂದ. ಭ್ರಷ್ಟತೆಗೆ ಪರ್ಯಾಯ ಹೆಸರೇ ಸರ್ಕಾರಿ ಅಧಿಕಾರಿಗಳು ಎಂಬಂತಾಗಿದೆ.

ಕೆಲವೊಮ್ಮೆ ಲಂಚವನ್ನೂ ದೌರ್ಜನ್ಯದಿಂದ, ಅಮಾನವೀಯವಾಗಿ, ಅಸಹ್ಯವಾಗಿ, ಒತ್ತಡ ಪೂರ್ವಕವಾಗಿ, ಕಿತ್ತುಕೊಳ್ಳಲಾಗುತ್ತದೆ.

ಒಬ್ಬ ಕೆಳ ದರ್ಜೆಯ ಅಧಿಕಾ–ರಿಯಿಂದ ಉನ್ನತ ಸ್ಥಾನದ ಅಧಿಕಾ–ರಿಯವರೆಗೆ ಅವರವರ ಯೋಗ್ಯತೆಗೆ ಅನುಗುಣವಾಗಿ ಲಂಚ ಕೀಳುತ್ತಾರೆ. ಸರ್ಕಾರಿ ಸೇವಕ – ಸರ್ಕಾರದಿಂದ ಕೆಲಸಕ್ಕೆ ಸಂಬಳ ತೆಗೆದುಕೊಳ್ಳುವ ಕೂಲಿಯವ ಎಂಬುದನ್ನು ಮರೆತು ದರ್ಪ ಮೆರೆಯುತ್ತಾರೆ..

ಇದು ಇಡೀ ದೇಶದ ಅಧೋಗತಿಗೆ ಅತಿಮುಖ್ಯ ಕಾರಣವಾಗಿದೆ. ಬಡ್ತಿ – ಹೆಚ್ಚಿನ ಸಂಬಳ – ಭದ್ರತೆ ಎಲ್ಲವನ್ನೂ ಕಾಲಕಾಲಕ್ಕೆ ಮತ್ತು ಖಚಿತವಾಗಿ ನೀಡುವ ಆಡಳಿತಗಾರರು ಹಾಗೆಯೇ ಅವರ ಜವಾಬ್ದಾರಿ ಕರ್ತವ್ಯ ಪ್ರಾಮಾಣಿಕತೆಗಳ ಮೇಲೆಯೂ ತುಂಬಾ ಗಂಭೀರ ಮೇಲ್ವಿಚಾರಣೆ ಮಾಡಬೇಕಾಗುತ್ತದೆ. ಅವರ ತಪ್ಪುಗಳಿಗೆ ಹೆಚ್ಚಿನ ಶಿಕ್ಷೆ ಮತ್ತು ಪಶ್ಚಾತ್ತಾಪ ಪಡುವಂತ ವ್ಯವಸ್ಥೆ ರೂಪಿಸಬೇಕಿದೆ..

ಸರ್ಕಾರದ ಕೆಲಸವೆಂದರೆ ಅದು ಜೀವನ ಪರ್ಯಂತ ಆರಾಮ ಎಂಬ ಕಲ್ಪನೆ ಹೋಗಿ ಅದೊಂದು ಅತ್ಯಂತ ಪವಿತ್ರ – ಜವಾಬ್ದಾರಿಯುತ ಮತ್ತು ಕಷ್ಟದ ಕೆಲಸ ಎಂಬ ಭಾವನೆ ಮೂಡಿಸಬೇಕಿದೆ..

ಭಾರತ ಇನ್ನೂ ಬಹಳ ಬಡ ದೇಶ. ಈಗಲೂ ಎಷ್ಟೋ ಜನರಿಗೆ ಎರಡು ಹೊತ್ತಿನ ಊಟ ಸಿಗುತ್ತಿಲ್ಲ. ಎಷ್ಟೋ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿವೆ. ಅಂತಹ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ಕೊಡುವ ಸಂಬಳ ಹೆಚ್ಚೇ ಇದೆ, ಇರಲಿ. ಆದರೆ ಅದರ ಸಂಪೂರ್ಣ ಉಪಯೋಗ ಸಮಾಜಕ್ಕೆ ಸಿಗುವಂತಾಗಲಿ,

ಆ ದಿನಗಳು ಬೇಗ ಬರಲಿ ಎಂದು ಆಶಿಸುತ್ತಾ..

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR